# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಅಕ್ಟೋಬರ್ 31, 2021

ಸಂಪುಟ : 48 ಸಂಚಿಕೆ : 170 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಪುನೀತ್ ಅಂತಿಮ ದರ್ಶನಕ್ಕೆ ಜನಸಾಗರ

## ಕಂಠೀರವ ಸ್ಟುಡಿಯೋದಲ್ಲಿ ಇಂದು ಅಂತ್ಯಕ್ರಿಯೆ



**ವರನಟ ಡಾ. ರಾಜ್‌ಕುಮಾರ್ ಅವರ ಸಮಾಧಿಯ ಪಕ್ಕದಲ್ಲೇ ಪುನೀತ್ ಅಂತ್ಯ ಸಂಸ್ಕಾರ**

ಬೆಂಗಳೂರು, ಅ. 30 - ಹೃದಯಾಘಾತದಿಂದ ಕೊನೆಯುಸಿರೆಳೆದ ಪವರ್‌ಸ್ಟಾರ್ ಪುನೀತ್‌ರಾಜ್‌ಕುಮಾರ್ ಅವರ ಅಂತ್ಯಕ್ರಿಯೆ ಭಾನುವಾರ ನಡೆಯಲಿದೆ.

ನಗರದ ಕಂಠೀರವ ಸ್ಟುಡಿಯೋದಲ್ಲಿ ಪುನೀತ್ ಅವರ ಅಂತ್ಯ ಸಂಸ್ಕಾರ ಜರುಗಲಿದೆ. ರಾಘವೇಂದ್ರ ರಾಜ್‌ಕುಮಾರ್ ಅವರ ಹಿರಿಯ ಪುತ್ರ ವಿನಯ್ ರಾಜಕುಮಾರ್ ನೆರವೇರಿಸಲಿದ್ದಾರೆ.

ಪುನೀತ್ ರಾಜ್‌ಕುಮಾರ್ ಅವರಿಗೆ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ಹೀಗಾಗಿ ಪಾರ್ಥಿವ ಶರೀರದ ವಿಧಿ ವಿಧಾನಗಳನ್ನು ವಿನಯ್ ನೆರವೇರಿಸಲಿದ್ದಾರೆ.

ಪುನೀತ್ ಅವರ ಸೋದರ ಮಾವ ಚೆನ್ನೇಗೌಡ ಹಾಗೂ ಬಿಜೆಪಿಯ ಶಾಸಕ ಕುಮಾರ್ ಬಂಗಾರಪ್ಪ ಅವರ ಸಮ್ಮುಖದಲ್ಲಿ ಅಬಕಾರಿ ಸಚಿವ ಗೋಪಾಲಯ್ಯ ಅವರು ಅಂತ್ಯಸಂಸ್ಕಾರ ನಡೆಯುವ ಸ್ಥಳ ಮತ್ತು ಪೂರ್ವ ಸಿದ್ಧತೆಯನ್ನು ಮಾಡಿದರು.

ವರನಟ ಡಾ. ರಾಜ್‌ಕುಮಾರ್ ಅವರ ಸಮಾಧಿಯ ಪಕ್ಕದಲ್ಲೇ ಪುನೀತ್ ಅವರ ಅಂತ್ಯ ಸಂಸ್ಕಾರ ನಡೆಯಲಿದೆ.

ಅಂತ್ಯ ಸಂಸ್ಕಾರ ನಡೆಯುವ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯಬಾರದೆಂದು 50 ಬೆಟಾಲಿಯನ್ ಪೊಲೀಸರನ್ನು ನಿಯೋಜಿಸಲಾಗಿದೆ.

ಅಂತ್ಯ ಸಂಸ್ಕಾರ ನಡೆಯುವ ಕಂಠೀರವ ಸ್ಟುಡಿಯೋದಲ್ಲಿ ಪುನೀತ್ ರಾಜ್‌ಕುಮಾರ್ ಕುಟುಂಬದ ಸಂಬಂಧಿಗಳು, ಸಿನಿಮಾ ಜಗತ್ತಿನ ಕಲಾವಿದರು ಹಾಗೂ ಅತಿ ಗಣ್ಯರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪುನೀತ್ ಅವರ ಹಿರಿಯ ಸಹೋದರರಾದ ಶಿವರಾಜಕುಮಾರ್ ಹಾಗೂ ರಾಘವೇಂದ್ರ ರಾಜ್‌ಕುಮಾರ್ ಅವರ ಜೊತೆ ಸಮಾಲೋಚನೆ ನಡೆಸಿದ ನಂತರ, ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಸಲು ತೀರ್ಮಾನಿಸಿದ್ದಾರೆ.

ಕುಟುಂಬದೊಟ್ಟಿಗೆ ಸಮಾಲೋಚನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಯವರು, ಕಳೇಬರ ವೀಕ್ಷಿಸಲು ಅಭಿಮಾನಿಗಳ ಮಹಾಪೂರವೇ ಹರಿದು ಬರುತ್ತಿದೆ. ಅವರ ಎಲ್ಲಾ ಅಭಿಮಾನಿಗಳಿಗೂ ಪುನೀತ್ ಅವರ ಅಂತಿಮ ದರ್ಶನ ಪಡೆದುಕೊಳ್ಳಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ತೀರ್ಮಾನಕ್ಕೆ ಬರಲಾಗಿದೆ. ಕುಟುಂಬದವರ (2ನೇ ಪುಟಕ್ಕೆ)

# ಸರಳ ರಾಜ್ಯೋತ್ಸವಕ್ಕಾಗಿ ಮಾರ್ಗಸೂಚಿ

ಬೆಂಗಳೂರು, ಅ. 30- ಕರ್ನಾಟಕ ರಾಜ್ಯೋತ್ಸವ ವನ್ನು ಸರಳ ಮತ್ತು ಗೌರವ ಪೂರ್ವಕವಾಗಿ ಆಚರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ರಾಜ್ಯೋತ್ಸವ ಆಚರಣೆ ಮಾಡುವ ಸಂಬಂಧ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು, ಕೋವಿಡ್ ನಿಯಮಾವಳಿಗಳನ್ನು ಮೀರಿ ಆಚರಣೆ ಮಾಡಿದರೆ, ಶಿಸ್ತು ಕ್ರಮ ಕೈಗೊಳ್ಳುವುದಾಗಿ ತಿಳಿಸಿದೆ.

ರಾಜ್ಯಾದ್ಯಂತ 500ಕ್ಕಿಂತ ಹೆಚ್ಚು ಜನ ಸೇರಿಸದೇ ರಾಜ್ಯೋತ್ಸವ ಆಚರಣೆ ಮಾಡಬಹುದು. ಇಂತಹ ಸಂದರ್ಭದಲ್ಲಿ ಮಾಸ್ಕ್, ಸ್ಯಾನಿಟೈಸರ್ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು.

ಸಾಮಾಜಿಕ ಅಂತರವಿಲ್ಲದ ಕಾರ್ಯಕ್ರಮಗಳನ್ನು ನಿಷೇಧ ಮಾಡುವುದಾಗಿ ತಿಳಿಸಿದೆ. ರಾಜ್ಯೋತ್ಸವ ಆಚರಣೆ ವೇಳೆ ನಡೆಯುವ ಮನರಂಜನೆ ಕಾರ್ಯಕ್ರಮಗಳಲ್ಲೂ 500 ಜನಕ್ಕಿಂತ ಹೆಚ್ಚು ಜನ ಮೀರಬಾರದು. ಸಂಘ, ಸಂಸ್ಥೆಗಳು ಆಚರಣೆಯ ಮುನ್ನ ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿ ಪಡೆಯಬೇಕು.

ಕನಿಷ್ಠ ಸಂಸ್ಕೃತಿ ಮತ್ತು ಮನರಂಜನೆ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರು, ಅನಾರೋಗ್ಯ ಪೀಡಿತರು, ಪುಟ್ಟ ಮಕ್ಕಳು, ಕಾರ್ಯಕ್ರಮದಿಂದ ದೂರವಿರಬೇಕು. ಮಾರ್ಗಸೂಚಿಗಳನ್ನು ಉಲ್ಲಂಘಿಸಿದಲ್ಲಿ, ಅಂತಹವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ, ಸೆಕ್ಷನ್ 188 ರಡಿಯಲ್ಲಿ ಶಿಸ್ತುಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದೆ.

## ನಾಳೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಅನುಮಾನ

### ಪುನೀತ್ ನಿಧನದ ಹಿನ್ನೆಲೆಯಲ್ಲಿ ಪಟ್ಟಿ ಅಂತಿಮ ವಿಳಂಬ

ಬೆಂಗಳೂರು, ಅ. 30 - ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ, ನವೆಂಬರ್ 1 ರಂದು ನಡೆಯುವುದು ಅನುಮಾನವಾಗಿದೆ.

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ 66 ಗಣ್ಯರಿಗೆ ಪ್ರಶಸ್ತಿ ನೀಡಲು ಸರ್ಕಾರ ತೀರ್ಮಾನಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ನಿನ್ನೆ ಮಧ್ಯಾಹ್ನ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಪಟ್ಟಿ ಅಂತಿಮಗೊಳಿಸುವ ಪ್ರಕ್ರಿಯೆ ನಡೆದಿತ್ತು.

ಆದರೆ, ಇದೇ ವೇಳೆಗೆ ಪುನೀತ್ ಅವರ ಅಕಾಲಿಕ ನಿಧನದ ಸುದ್ದಿ ಬಂದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ಸಭೆಯನ್ನು ರದ್ದು ಮಾಡಿದರು. ಪುನೀತ್ ಅವರ ಅಂತ್ಯ ಸಂಸ್ಕಾರ ಪೂರ್ಣಗೊಂಡ ನಂತರವೇ ಮತ್ತೆ ಸಭೆ ಸೇರಿ ಪ್ರಶಸ್ತಿಗೆ ಗಣ್ಯರನ್ನು ಆಯ್ಕೆ ಮಾಡಬೇಕಿದೆ.

ಆಯ್ಕೆ ಮಾಡಿದ (2ನೇ ಪುಟಕ್ಕೆ)

## ದೀಪಾವಳಿ : ಹಸಿರು ಪಟಾಕಿ ಮಾರಾಟಕ್ಕೆ ಮಾತ್ರ ಅವಕಾಶ

**ರಾಜ್ಯ ಸರ್ಕಾರದಿಂದ ಹಬ್ಬದ ಆಚರಣೆಗೆ ಮಾರ್ಗಸೂಚಿ ಬಿಡುಗಡೆ**


ಬೆಂಗಳೂರು, ಅ. 30 - ಕೊರೊನಾ ಭೀತಿಯ ನಡುವೆಯೇ ದೀಪಾವಳಿ ಹಬ್ಬವನ್ನು ಸರಳವಾಗಿ ಹಾಗೂ ಭಕ್ತಿಯಿಂದ ಆಚರಿಸಲು ರಾಜ್ಯ ಸರ್ಕಾರ ಇಂದು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಸುಪ್ರೀಂ ಕೋರ್ಟ್ ಆದೇಶದಂತೆ ಹಸಿರು ಪಟಾಕಿಗಳ ಮಾರಾಟಕ್ಕೆ ಮತ್ತು ಸಿಡಿಸಲು ಅವಕಾಶ ನೀಡಲಾಗಿದೆ. ನವೆಂಬರ್ 1 ರಿಂದ 10 ರೊಳಗೆ ಪಟಾಕಿ ಮಾರಾಟ ಮತ್ತು ಅವುಗಳನ್ನು ಸಿಡಿಸುವ ಕಾರ್ಯ ಪೂರ್ಣಗೊಳ್ಳಬೇಕು.

ಹಸಿರು ಪಟಾಕಿಗಳ ಮಾರಾಟಕ್ಕೆ ಮಳಿಗೆಗಳನ್ನು ಈ ಅವಧಿಯಲ್ಲಿ ತೆರೆಯಲು ಅನುಮತಿ ನೀಡಲಾಗಿದೆ. ಬಯಲು ಪ್ರದೇಶಗಳಲ್ಲಿ ಕೋವಿಡ್ ಮಾರ್ಗಸೂಚಿಯನ್ನು ಗಮನದಲ್ಲಿಟ್ಟುಕೊಂಡು, ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ನಿಯಮಾವಳಿಗಳನ್ನು ಉಲ್ಲಂಘಿಸಿದಲ್ಲಿ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿಯೂ ಎಚ್ಚರಿಕೆ ನೀಡಲಾಗಿದೆ.


|| ಶ್ರೀ ಕಲ್ಲೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ಜಿಲ್ಲೆ ಜಗಳೂರು ಟೌನ್ ವಾಸಿ ಶ್ರೀಮತಿ ಆಶಾ ಬಸವರಾಜು ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು. ದಿನಾಂಕ : 28.10.2021ನೇ ಗುರುವಾರ ಬೆಳಿಗ್ಗೆ 6.30 ಗಂಟೆಗೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಜಿ.ಎಸ್. ಬಸವರಾಜು**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ : 1.11.2021ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಶ್ರೀ ಸದ್ಯೋಜಾತ ಸ್ವಾಮಿಗಳವರ ಹಿರೇಮಠ, ಎಂ.ಸಿ.ಸಿ. 'ಬಿ' ಬ್ಲಾಕ್, ಶಾಮನೂರು ರಸ್ತೆ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಆಶಾ ಬಸವರಾಜು, ಶ್ರೀಮತಿ ತನುಜ, ಶ್ರೀ ಮಧು ಬಿ. ಗೌಡ, ಶ್ರೀಮತಿ ಮೌನಗೌಡ, ಶ್ರೀ ವಿನಯ್ ಪಟೇಲ್, ಸಹೋದರ, ಸಹೋದರಿಯರು ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಗೌಡ್ರು ವಂಶಸ್ಥರು, ಜಗಳೂರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ಪಶ್ಚಿಮ ಬಂಗಾಳ, ಅಸ್ಸಾಂಗಳಲ್ಲಿ ಕೊರೊನಾ ಹೆಚ್ಚಳ: ರಾಜ್ಯಕ್ಕೆ ಎಚ್ಚರ

ನವದೆಹಲಿ, ಅ. 30 - ಕೊರೊನಾ ಪಾಸಿಟಿವ್ ಪ್ರಕರಣಗಳ ವಾರದ ದರ ಹೆಚ್ಚುತ್ತಿರುವ ಹಾಗೂ ಅಸ್ಸಾಂ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಟೆಸ್ಟ್ ಪ್ರಮಾಣ ಕಡಿಮೆಯಾಗುತ್ತಿರುವ ಬೆನ್ನಲ್ಲೇ ರಾಜ್ಯಗಳು ಎಚ್ಚರಿಕೆ ವಹಿಸಲು ಕೇಂದ್ರ ಸರ್ಕಾರ ಸೂಚನೆ ನೀಡಿದೆ.

ಅಸ್ಸಾಂ ಹಾಗೂ ಪಶ್ಚಿಮ ಬಂಗಾಳಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಆರತಿ ಅಹುಜ, ಅಕ್ಟೋಬರ್ 20-26ರ ವಾರದಲ್ಲಿ ಕೊರೊನಾ ಪಾಸಿಟಿವ್ ದರ ಹೆಚ್ಚಾಗಿರುವುದರ ಬಗ್ಗೆ ಗಮನ ಸೆಳೆದಿದ್ದಾರೆ.

ಅಕ್ಟೋಬರ್ 20 - 26ರ ಅವಧಿಯಲ್ಲಿ ಅಸ್ಸಾಂನಲ್ಲಿ ಕೊರೊನಾ ಪಾಸಿಟಿವ್ ದರ ಶೇ.41ರಷ್ಟು ಹೆಚ್ಚಾಗಿದೆ. ಮುಂಚೆ ಶೇ.1.89 ರಷ್ಟಿದ್ದ ಪಾಸಿಟಿವ್ ದರ, ನಂತರದಲ್ಲಿ ಶೇ. 2.22ಕ್ಕೆ ಹೆಚ್ಚಾಗಿದೆ. (2ನೇ ಪುಟಕ್ಕೆ)


**ಶ್ರೀಮತಿ ಗಂಗಮ್ಮ ನಿಧನ**



ದಾವಣಗೆರೆ ವಿನೋಬನಗರ 1ನೇ ಮೇನ್, 12ನೇ ಕ್ರಾಸ್ ವಾಸಿ, ಹದಡಿ ಸೂಲಗಿತ್ತಿ ವಂಶಸ್ಥರಾದ ಶ್ರೀಮತಿ ಪೂಜ್ಯ ಗಂಗಮ್ಮ (79) ಅವರು ದಿನಾಂಕ 30.10.2021ನೇ ಶನಿವಾರ ಮಧ್ಯಾಹ್ನ 12.20ಕ್ಕೆ ದೈವಾಧೀನರಾದರು. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 31.10.21ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಸ್ವ ಗ್ರಾಮ ಹದಡಿಯ ತಮ್ಮ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವೃಂದದವರು.

**94484 15578**


# ಮೋದಿ - ಪೋಪ್ ಫ್ರಾನ್ಸಿಸ್ ಭೇಟಿ

ವ್ಯಾಟಿಕಾನ್ ಸಿಟಿ, ಅ. 30 - ಪ್ರಧಾನ ಮಂತ್ರಿ, ನರೇಂದ್ರ ಮೋದಿ ಅವರು ಶನಿವಾರ ಪೋಪ್ ಫ್ರಾನ್ಸಿಸ್ ಅವರನ್ನು ಭೇಟಿ ಮಾಡಿದ್ದು, ಹಲವಾರು ವಿಷಯಗಳ ಬಗ್ಗೆ ಚರ್ಚಿಸಿದ್ದಾರಲ್ಲದೇ, ಭಾರತಕ್ಕೆ ಬರುವಂತೆ ಆಹ್ವಾನಿಸಿದ್ದಾರೆ.

2013ರಲ್ಲಿ ಫ್ರಾನ್ಸಿಸ್ ಪೋಪ್ ಆದ ನಂತರ ಮೊದಲ ಬಾರಿಗೆ ಮೋದಿ ಭೇಟಿ ಮಾಡಿದ್ದಾರೆ. ನಂತರ ಹೇಳಿಕೆ ನೀಡಿರುವ ಪ್ರಧಾನಿ, ಸೌಹಾರ್ದಯುತ ಭೇಟಿಯ ನಂತರ ಭಾರತಕ್ಕೆ ಬರುವಂತೆ ಆಹ್ವಾನಿಸಿರುವುದಾಗಿ ಹೇಳಿದ್ದಾರೆ. ಈ ಹಿಂದೆ 1999 ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿ ಯಾಗಿದ್ದ ಸಂದರ್ಭದಲ್ಲಿ ಆಗಿನ ಪೋಪ್ (5ನೇ ಪುಟಕ್ಕೆ)

# ಪಟಾಕಿ ನಿಷೇಧಕ್ಕೆ ಆರೆಸ್ಸೆಸ್ ಆಕ್ಷೇಪ

ಧಾರವಾಡ, ಅ. 30 - ದೀಪಾವಳಿಯ ಸಂದರ್ಭದಲ್ಲಷ್ಟೇ ಪಟಾಕಿ ನಿಷೇಧ ಮಾಡುವುದಕ್ಕೆ ಆರ್.ಎಸ್.ಎಸ್. ಆಕ್ಷೇಪಿಸಿದ್ದು, ಹಬ್ಬ ಹತ್ತಿರದಲ್ಲಿದ್ದಾಗ ನಿಷೇಧ ಮಾಡಬಾರದು ಎಂದು ಅಭಿಪ್ರಾಯ ಪಟ್ಟಿದೆ.

ಆರ್.ಎಸ್.ಎಸ್. ಕಾರ್ಯಕಾರಿ ಸಭೆಯ ನಂತರ ಮಾತನಾಡಿರುವ ಸಂಘದ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ, ಪರಿಸರ ಮಾಲಿನ್ಯ ಎಂಬುದನ್ನು ಮುಂದಿಟ್ಟುಕೊಂಡು ಪಟಾಕಿ ಹೊಡೆಯುವುದು ಬೇಡ ಎಂದು ಹೇಳುತ್ತಾರೆ. ಆದರೆ ಈ ವಿಚಾರ ದೀಪಾವಳಿ ಹಬ್ಬದ ವೇಳೆ ಮಾತ್ರವೇ ಯಾಕೆ ಬರುತ್ತದೆ? ಎಂದು ಪ್ರಶ್ನಿಸಿದ್ದಾರೆ.

ಪಟಾಕಿ ಮಾಡಿ, ಮಾರಾಟಕ್ಕೆ ಹಂಚಿಕೆಯಾದ ಮೇಲೆ ನಿಷೇಧ ಎನ್ನುತ್ತಾರೆ. ಜನರ ಕೈಗೆ ಪಟಾಕಿ ಬಂದ ಬಳಿಕ ನಿಷೇಧ (2ನೇ ಪುಟಕ್ಕೆ)







# ದಮನಿತ ಮಹಿಳೆಯರಿಗೆ ನಿವೇಶನಕ್ಕೆ ಕ್ರಮ

**ಚೇತನ, ಟ್ರ್ಯಾನ್ಸ್‌ಜೆಂಡರ್ ಹಾಗೂ ದಮನಿತ ಮಹಿಳೆಯರ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಡಿಸಿ ಭರವಸೆ**

ದಾವಣಗೆರೆ, ಅ.30- ತುರ್ಚಘಟ್ಟದ ಬಳಿ ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ದಮನಿತ ಮಹಿಳೆಯರಿಗೆ ನಿವೇಶನ ಒದಗಿಸಲು ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಹಮ್ಮಿಕೊಂಡಿದ್ದ ಟ್ರ್ಯಾನ್ಸ್‌ಜೆಂಡರ್ ಹಾಗೂ ದಮನಿತ ಮಹಿಳೆಯರ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಮತ್ತು ಉಸ್ತುವಾರಿ ಸಮಿತಿ ಕೋಶ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಲಿಂಗತ್ವ ಅಲ್ಪಸಂಖ್ಯಾತರಿಗೆ ಚೇತನ ಮತ್ತು ಧನಶ್ರೀ ಯೋಜನೆ, ಪುನರ್ ವಸತಿ ಸೇರಿದಂತೆ ಹಲವು ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವಂತಾಗಬೇಕು. ಇತರರಂತೆ ಬದುಕು ನಡೆಸುವಂತಾಗಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅಭಿವೃದ್ಧಿ ನಿರೀಕ್ಷಕಿ ಕೆ.ಮಂಜುಳ ಮಾತನಾಡಿ, ದುರ್ಗಶಕ್ತಿ ಏಡ್ಸ್ ತಡೆಗಟ್ಟುವ ಮಹಿಳಾ ಸಂಘ ಸಂಸ್ಥೆಯಲ್ಲಿ ಒಟ್ಟು 3456 ದಮನಿತ ಮಹಿಳೆಯರು ನೋಂದಣಿ ಮಾಡಿಕೊಂಡಿದ್ದು, ಎಲ್ಲರೂ ಆಧಾರ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿ ಹೊಂದಿದ್ದಾರೆ. ಪಡಿತರ ಚೀಟಿ ಹೊಂದಿಲ್ಲದ 744 ಲಿಂಗತ್ವ ಅಲ್ಪಸಂಖ್ಯಾತರಿದ್ದಾರೆ ಎಂದು ಮಾಹಿತಿ ನೀಡಿದರು.

ಸಿಪಿಐ ಹೆಚ್.ಗುರುರಾಜ್ ಮಾತನಾಡಿ, ತುಂಗಭದ್ರಾ ಬಡಾವಣೆಯಿಂದ ಬಾಡಾ ಕ್ರಾಸ್ ವರೆಗೂ ಮಂಗಳಮುಖಿಯರ ಹಾವಳಿ ಹೆಚ್ಚಾಗಿದ್ದು, ತಡೆಗೆ ಹಲವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂದರು.

ಇದಕ್ಕೆ ಜಿಲ್ಲಾಧಿಕಾರಿಗಳು ಪ್ರತಿಕ್ರಿಯಿಸಿ, ಈ ಭಾಗಕ್ಕೆ ಇಷ್ಟರಲ್ಲೇ ರಾತ್ರಿ 8 ಗಂಟೆಯ ಮೇಲ್ಪಟ್ಟು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆಗೂಡಿ ಗಸ್ತು ಬರಲಿದ್ದು, ಈ ಪ್ರಕರಣದಲ್ಲಿ ಯಾರೇ ಕಂಡುಬಂದರು ಯಾವುದೇ ಮುಲಾಜಿ ಲ್ಲದೇ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳಲಾ ಗುವುದು ಎಂದು ಎಚ್ಚರಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ಪ್ರವೀಣ್ ನಾಯಕ್ ಮಾತನಾಡಿ, ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಂಡು ಇದೇ ವೃತ್ತಿಯಲ್ಲಿ ತೊಡಗಿಸಿಕೊಳ್ಳಬಾರದು. ಅನು ದಾನವನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳಿ ಎಂದರು.

ಸಮುದಾಯದ ಮುಖಂಡರಾದ ನಂದನಮ್ಮ ಮಾತನಾಡಿ, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಂಡವರ ವಿರುದ್ಧ ಕ್ರಮಕ್ಕೆ ಅಭ್ಯಂತರವಿಲ್ಲ. ಆದರೆ ಸೆಕ್ಸ್ ವರ್ಕ್ ಹಾಗೂ ಭಿಕ್ಷಾಟನೆ ನಮ್ಮ ವೃತ್ತಿಯಾಗಿದ್ದು ಅದನ್ನು ತಡೆಯಬೇಡಿ. ಕಳೆದ 10 ವರ್ಷಗಳಿಂದ ವಸತಿ ಸೌಲಭ್ಯಕ್ಕಾಗಿ ಅರ್ಜಿ ಹಾಕುತ್ತಿದ್ದು ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದರು.

ಅಭಯ ಸ್ಪಂದನ ಅಧ್ಯಕ್ಷೆ ಚೈತ್ರ.ಎಸ್ ಮಾತನಾಡಿ, ಜಿಲ್ಲಾ ಮಟ್ಟದಲ್ಲಿ ಸಮುದಾಯದ ಜನರಿಗೆ ಸರ್ಕಾರಿ ನೌಕರಿ ಒದಗಿಸಬೇಕು. ಎಪಿಎಂಸಿ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ನಗರಾಭಿವೃದ್ಧಿ ಯೋಜನಾ ಕೋಶದ ನಿರ್ದೇಶಕಿ ನಜ್ಮಾ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಕೌಸರ್ ರೇಷ್ಮಾ, ಎನ್‌ಜಿಒ ಸಂಸ್ಥೆಗಳ ಅಧಿಕಾರಿಗಳು, ಅಲ್ಪಸಂಖ್ಯಾತರ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.



**ಶಿಕ್ಷಣ ಸಂಸ್ಥೆಯ ಸುತ್ತ ಮುತ್ತಲ ಪ್ರದೇಶಗಳಲ್ಲಿ, ಪಾರ್ಕ್‌ಗಳಲ್ಲಿ, ವಿಶ್ರಾಂತಿ ಧಾಮಗಳಲ್ಲಿ ಮಾದಕ ವಸ್ತುಗಳ ಮಾರಾಟ ನಡೆಯುತ್ತಿರುವ ಬಗ್ಗೆ ದೂರುಗಳು ಕೇಳಿಬರುತ್ತಿವೆ. ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಈಗಾಗಲೇ ಚರ್ಚಿಸಿದ್ದು, ಮಾದಕ ವಸ್ತುಗಳ ಮಾರಾಟ ಜಾಲವನ್ನು ಹಿಡಿದು ಮಟ್ಟಹಾಕಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಲಾಗುವುದು.**

**- ಮಹಾಂತೇಶ ಬೀಳಗಿ, ಜಿಲ್ಲಾಧಿಕಾರಿ**

# ಪುನೀತ್ ಅಂತಿಮ ದರ್ಶನಕ್ಕೆ ಜನಸಾಗರ

**(1ನೇ ಪುಟದಿಂದ)** ಸಲಹೆಯಂತೆ ನಾಳೆ ಬೆಳಗ್ಗೆ ಅಂತ್ಯಸಂಸ್ಕಾರ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದರು.

ಪುನೀತ್ ಅವರ ಹಿರಿಯ ಪುತ್ರಿ ಧೃತಿ ಅವರು ಆಗಮಿಸಿದ್ದು, ಸಂಜೆಯೇ ಅಂತ್ಯಕ್ರಿಯೆ ನಡೆಸಲು ಈ ಮುನ್ನ ತೀರ್ಮಾನಗೊಳಿಸಲಾಗಿತ್ತು. ಸಂಜೆ ವೇಳೆ ಗೊಂದಲವುಂಟಾಗಬಹುದು ಎಂಬುದು, ಮತ್ತೊಂದೆಡೆ ಪುನೀತ್ ಅಭಿಮಾನಿಗಳು ಕಳೇಬರ ವೀಕ್ಷಿಸಲು ಹಿಂಡು ಹಿಂಡಾಗಿ ಬರುತ್ತಿರುವುದರಿಂದ ಅವರಿಗೆ ನಿರಾಸೆ ಮಾಡಬಾರದೆಂಬ ಉದ್ದೇಶದಿಂದ ನಾಳೆ ಬೆಳಿಗ್ಗೆ ಅಂತ್ಯಕ್ರಿಯೆ ಮಾಡಲು ತೀರ್ಮಾನ ಕೈಗೊಳ್ಳಲಾಯಿತು.

ಅಂತ್ಯಕ್ರಿಯೆ ಸಂದರ್ಭದಲ್ಲಿ ಪುನೀತ್ ಕುಟುಂಬವರ್ಗ ಹಾಗೂ ಗಣ್ಯರಿಗೆ ಮಾತ್ರ ಅವಕಾಶ. ಅಭಿಮಾನಿಗಳು ಕಂಠೀರವ ಕ್ರೀಡಾಂಗಣದಲ್ಲೇ ಪುನೀತ್ ಅವರ ದರ್ಶನ ಪಡೆದುಕೊಳ್ಳಬೇಕು. ನಾಳೆ ಬೆಳಿಗ್ಗೆ ಕಂಠೀರವ ಕ್ರೀಡಾಂಗಣದಿಂದ ನೇರವಾಗಿ ಕಂಠೀರವ ಸ್ಟುಡಿಯೋಗೆ ಕಳೇಬರ ತಂದು ಅವರ ಕುಟುಂಬದ ರೀತಿ ನೀತಿಯಂತೆ ಅಂತ್ಯಕ್ರಿಯೆ ನಡೆಯಲಿದೆ ಎಂದರು.

ಕಂಠೀರವ ಕ್ರೀಡಾಂಗಣದಲ್ಲಿ ಎರಡನೇ ದಿನವೂ ಸಾವಿರಾರು ಅಭಿಮಾನಿಗಳು ಪುನೀತ್ ದರ್ಶನ ಪಡೆದರು. ರಾಜ್ಯದ ರಾಜ್ಯಪಾಲ ತಾವರಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಅವರ ಸಂಪುಟದ ಸಹೋದ್ಯೋಗಿಗಳು ದಕ್ಷಿಣ ಭಾರತದ ಖ್ಯಾತ ನಟ, ನಟಿಯರು ಪುನೀತ್ ಅವರ ದರ್ಶನ ಪಡೆದರು.



ತಂದೆ, ನಟ ಪುನೀತ್ ರಾಜ್‌ಕುಮಾರ್ ಅವರ ಅಂತಿಮ ದರ್ಶನ ಪಡೆದ ಪುತ್ರಿ ಧೃತಿ

## ಪಶ್ಚಿಮ ಬಂಗಾಳ, ಅಸ್ಸಾಂಗಳಲ್ಲಿ ಕೊರೊನಾ ಹೆಚ್ಚಳ

**(1ನೇ ಪುಟದಿಂದ)** ಟೆಸ್ಟ್‌ಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಅಹುಜ ಹೇಳಿದ್ದಾರೆ.

ಅಸ್ಸಾಂನ ಬರ್ಪೇಟ ಹಾಗೂ ಕಾಮಪೂರ ಮೆಟ್ರೋ ಜಿಲ್ಲೆಗಳಲ್ಲಿ ಕೊರೊನಾ ಪಾಸಿಟಿವ್ ದರ ಗಣನೀಯವಾಗಿ ಹೆಚ್ಚಾಗಿದೆ. ಅದೇ ರೀತಿ ಕೊಲ್ಕೊತಾ ಹಾಗೂ ಹೌರಾಗಳಲ್ಲಿ ಕೊರೊನಾ ಪ್ರಕರಣಗಳು ಹಾಗೂ ಪಾಸಿಟಿವ್ ದರ ಹೆಚ್ಚಾಗಿರುವುದರ ಬಗ್ಗೆ ಕ್ರಮ ತೆಗೆದುಕೊಳ್ಳಲು ತಿಳಿಸಲಾಗಿದೆ.ಪಶ್ಚಿಮ ಬಂಗಾಳದಲ್ಲಿ ಅಕ್ಟೋಬರ್ 13-19ರ ಅವಧಿಯಲ್ಲಿ 4,277 ಕೊರೊನಾ ಸೋಂಕಿತರು ಕಂಡು ಬಂದಿದ್ದರು. ಅಕ್ಟೋಬರ್ 20-26ರ ಅವಧಿಯಲ್ಲಿ 6,040 ಪ್ರಕರಣಗಳು ಕಂಡು ಬಂದಿವೆ ಎಂದು ಪತ್ರದಲ್ಲಿ ಹೇಳಲಾಗಿದೆ.

## ಶ್ರೀಗಳಿಂದ ಚಿತ್ರನಟ ಪುನೀತ್ ರಾಜ್‌ಕುಮಾರ್ ಅಂತಿಮ ದರ್ಶನ



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶ್ರೀ ಭಗೀರಥ ಗುರುಪೀಠದ ಜಗದ್ಗುರು ಶ್ರೀ ಡಾ. ಪುರುಷೋತ್ತಮಾನಂದ ಪುರಿ ಮಹಾಸ್ವಾಮೀಜಿ, ಕನಕ ಗುರುಪೀಠದ ಶ್ರೀ ಈಶ್ವರಾನಂದಪುರಿ ಮಹಾಸ್ವಾಮೀಜಿ, ಹರಿಹರ ಪಂಚಮಸಾಲಿ ಗುರುಪೀಠದ ಶ್ರೀ ವಚನಾನಂದ ಸ್ವಾಮೀಜಿ, ಕುಂಚಿಟಿಗ ಮಹಾಸಂಸ್ಥಾನದ ಡಾ. ಶಾಂತವೀರ ಮಹಾಸ್ವಾಮೀಜಿ, ಶ್ರೀ ಸಿದ್ದರಾಮೇಶ್ವರ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಮಹಾಸ್ವಾಮೀಜಿ, ಶ್ರೀ ಈಡಿಗ ಮಹಾ ಸಂಸ್ಥಾನದ ರೇಣುಕಾನಂದ ಸ್ವಾಮೀಜಿ ಅವರುಗಳು ನಟ ಪುನೀತ್ ರಾಜಕುಮಾರ್ ರವರ ಅಂತಿಮ ದರ್ಶನ ಪಡೆದು, ಗೌರವ ಸಲ್ಲಿಸಿ, ಮೃತರ ಆತ್ಮಕ್ಕೆ ಚಿರಶಾಂತಿಗಾಗಿ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರು.

## ಪುನೀತ್ ರಾಜಕುಮಾರ್ ನಿಧನಕ್ಕೆ ಕೆ.ಬಿ. ಬಡಾವಣೆ ನಾಗರಿಕರ ಸಂತಾಪ



ದಾವಣಗೆರೆ, ಅ.30- ಕನ್ನಡದ ಪ್ರಖ್ಯಾತ ಚಿತ್ರನಟ ಪುನೀತ್ ರಾಜಕುಮಾರ್ ಅವರ ಅಕಾಲಿಕ ನಿಧನದ ಸುದ್ದಿ ತೀವ್ರ ಆಘಾತ ತಂದಿದೆ ಎಂದು ಕೆ.ಬಿ. ಬಡಾವಣೆಯ 5ನೇ ಕ್ರಾಸ್‌ನ ಕನ್ನಡ ಚಿತ್ರರಂಗದ ಅಭಿಮಾನಿಗಳು ಸಂತಾಪ ವ್ಯಕ್ತಪಡಿಸಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಅವರು ವಿಭಿನ್ನ ಪ್ರತಿಭೆಯಿಂದ ಕನ್ನಡ ಚಿತ್ರರಂಗದ ಕಣ್ಮಣಿ ಆಗಿದ್ದರು. ಅವರ ನಿಧನದಿಂದ ಚಿತ್ರೋದ್ಯಮ ಉತ್ತಮ ಕಲಾವಿದರೊಬ್ಬರನ್ನು ಕಳೆದುಕೊಂಡು ಬಡವಾಗಿದೆ. ಕುಟುಂಬ ವರ್ಗದವರಿಗೆ ಮತ್ತು ಅಪಾರ ಅಭಿಮಾನಿ ಬಳಗಕ್ಕೆ ಉಂಟಾಗಿರುವ ನೋವು ಸಹಿಸಿಕೊಳ್ಳುವ ಶಕ್ತಿ ನೀಡಲಿ ಎಂದು ಅವರು ಕೋರಿದ್ದಾರೆ.

ಸಂತಾಪ ಸಭೆಯಲ್ಲಿ ಮಹಾಪೌರ ಎಸ್.ಟಿ. ವೀರೇಶ್, ಮಾಜಿ ಪಾಲಿಕೆ ಸದಸ್ಯ ಕೆ.ಜಿ. ಶಿವಕುಮಾರ್, ಕೆ.ಬಿ.ಬಡಾವಣೆಯ ನಾಗರಿಕರು ಉಪಸ್ಥಿತರಿದ್ದರು.

# ಸಹೋದರನನ್ನು ಕಳೆದುಕೊಂಡ ಭಾವನೆ ಆವರಿಸಿದೆ

**ಹರಪನಹಳ್ಳಿಯಲ್ಲಿ ಎಂ.ಪಿ.ಲತಾ**



ಹರಪನಹಳ್ಳಿ, ಅ.30- ಸಹೋದರ, ಮಾಜಿ ಶಾಸಕ ದಿ. ಎಂ. ರವೀಂದ್ರ ಅವರನ್ನು ಕಳೆದುಕೊಂಡಾಗ ಆಗಿರುವ ನೋವು ನಟ ಪುನೀತ್ ರಾಜುಕುಮಾರ್ ನಿಧನರಾದಾಗಲೂ ಆಗುತ್ತಿದೆ. ನಿಜಕ್ಕೂ ಸಹೋದರನನ್ನು ಕಳೆದುಕೊಂಡ ಭಾವನೆ ನಮ್ಮಲ್ಲಿ ಆವರಿಸಿದೆ ಎಂದು ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಹಡಗಲಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ನಡೆದ ನಟ ಪುನೀತ್ ರಾಜಕುಮಾರ್ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಪುನೀತ್ ಭಾವಚಿತ್ರಕ್ಕೆ ಪುಷ್ಪಾ ನಮನ ಸಲ್ಲಿಸಿ ಅವರು ಮಾತನಾಡಿದರು.

ವರನಟ ಡಾ. ರಾಜಕುಮಾರ್ ಕುಟುಂಬ ಮತ್ತು ನಮ್ಮ ತಂದೆ ಮಾಜಿ ಉಪಮುಖ್ಯಮಂತ್ರಿ ಎಂ.ಪಿ. ಪ್ರಕಾಶ್ ಅವರ ಕುಟುಂಬದ ಒಡನಾಟಗಳನ್ನು ನೆನಪಿಸಿಕೊಂಡ ಅವರು, ಅಕಾಲಿಕವಾಗಿ ನಮ್ಮೆಲ್ಲರನ್ನೂ ಆಗಲಿರುವ ಪ್ರೀತಿಯ ಅಪ್ಪು ಇನ್ನೂ ಬರೀ ನೆನಪಾಗಿ ಉಳಿಯಲಿದ್ದಾರೆ. ಎಂ.ಪಿ. ರವೀಂದ್ರ ಅವರೊಂದಿಗಿನ ಅಪ್ಪುವಿನ ಒಡನಾಟ ಮತ್ತು ಇವರಿಬ್ಬರ ಹೃದಯ ಶ್ರೀಮಂತಿಕೆ, ಸಾವಿನಲ್ಲೂ ಅತಿ ಚಿಕ್ಕ ವಯಸ್ಸಿನಲ್ಲಿಯೇ ಇಬ್ಬರೂ ನಮ್ಮೆಲ್ಲರನ್ನು ಅಗಲಿರುವುದು ನಿಜಕ್ಕೂ ಕಾಕತಾಳೀಯವಾಗಿದೆ ಎಂದರು.

ಮಾಜಿ ಶಾಸಕ, ಸಹೋದರ ಎಂ.ಪಿ. ರವೀಂದ್ರ ಕೂಡ 49 ವರ್ಷಕ್ಕೆ ಅಕಾಲಿಕ ನಿಧನ ಹೊಂದಿದ. ಪುನೀತ್ ಕೂಡ 46 ವರ್ಷಕ್ಕೆ ಅಕಾಲಿಕ ನಿಧನರಾಗಿದ್ದಾರೆ.

ದುರಂತವೆಂದರೆ ಇಬ್ಬರೂ ಕೂಡ ಇದೇ ಬೆಂಗಳೂರಿನ ವಿಕ್ರಂ ಆಸ್ಪತ್ರೆಯಲ್ಲಿ ಕೊನೆಯುಸಿರು ಬಿಟ್ಟಿದ್ದಾರೆ. ಹೀಗಾಗಿ ಎಂ.ಪಿ. ರವೀಂದ್ರ ಅವರ 3ನೇ ಪುಣ್ಯಸ್ಮರಣೆ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಚಿತ್ರ ಕಲಾ ಸ್ಪರ್ಧೆಯನ್ನು ರದ್ದುಗೊಳಿಸಿ, ಪುನೀತ್ ಅವರಿಗೆ ಗೌರವ ಸಲ್ಲಿಸುತ್ತೇವೆ ಎಂದು ಮಾಹಿತಿ ನೀಡಿದರು.

ಪುರಸಭೆ ಸದಸ್ಯರಾದ ಎಂ.ವಿ. ಅಂಜಿನಪ್ಪ, ಟಿ. ವೆಂಕಟೇಶ್, ಗೊಂಗಡಿ ನಾಗರಾಜ್, ಪೈಲ್ವಾನ್ ಗಣೇಶ್, ಮುಖಂಡರಾದ ಚಿಕ್ಕೇರಿ ಬಸಪ್ಪ, ಎಚ್. ವಸಂತಪ್ಪ, ಕಣವಿಹಳ್ಳಿ ಚಂದ್ರಶೇಖರ್, ಕಡಬಗೆರೆ ಗ್ರಾ.ಪಂ. ಅಧ್ಯಕ್ಷೆ ಅನುಷಾ ಮಂಜುನಾಥ, ನಂದಿಬೇವೂರು ಗ್ರಾ.ಪಂ. ಉಪಾಧ್ಯಕ್ಷೆ ಲಕ್ಷ್ಮಿ ಚಂದ್ರಶೇಖರ್, ಕಂಚಿಕೇರಿ ಜಯಲಕ್ಷ್ಮಿ, ರವಿ, ಯುವ ಶಕ್ತಿ ಪಡೆ ಅಧ್ಯಕ್ಷ ಉದಯಶಂಕರ್, ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ್, ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್, ಯುವ ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಕೆ. ರಿಯಾಜ್, ಚಿಕ್ಕೇರಿ ಬಸಪ್ಪ, ಎಂ.ವಿ. ಕೃಷ್ಣಕಾಂತ್, ಉಮಾ ಮಹೇಶ್ವರಿ, ದಾದಾಪುರ ಶಿವಪುತ್ರ, ಮಾಡ್ಲಿಗೆರೆ ಹನುಮಂತ, ಕವಿತಾ ಸುರೇಶ್, ಸುಮ ಜಗದೀಶ್ ಇನ್ನಿತರರಿದ್ದರು.

## 'ಪುನೀತನ ಈ ಸಾವು ನ್ಯಾಯವೇ ... ! ?'

ಓ...ದೇವರೇ ನೀನೆಷ್ಟು ಕ್ರೂರಿ ?
ಬೆಳಕಿನ್ನೇ ಕತ್ತಲಾಗಿಸಿ ಯಾಕಾದೆ ವೈರಿ !
ಕಾಲದ ಕೀಲುಗೊಂಬೆಗೆ
ಜೀವ ತುಂಬಿ ಹಾಡಿಸಿ,ಕುಣಿಸಿ
ಒಂದಿನ ಕ್ರೂರ ವಿಧಿಯ ಕೈಗೊಪ್ಪಿಸಿದ
ಆಯಾಮ ಮೀರಿದ ಮಾಯಾವಿಯೇ !

'ಆಲದ ಮರಕ್ಕೆ ಸಿಡಿಲು ಬಡಿದು
ಪ್ರತಿಭಾ ಬಿಳಿಲು ಕಳಚಿ ನೆಲಕ್ಕುರುಳಿ
ಮಣ್ಣಲಿ ಮಣ್ಣಾದರೂ ಸೃಷ್ಟಿಯಲಿ
ದೃಷ್ಟಿ ಲೀನ....

ಕೋಟಿ ಪದಗಳಿಗೂ ಮೀರಿದ
ಗುಣ ಸಾಗರದ ಪದಕಕ್ಕೆ
ಅಕಾಲಿಕ ಸಾವಿನ ಎರಕ...

ಮಿರಿಮಿರಿ ಮಿಂಚುತ್ತಿದ್ದ ನಕ್ಷತ್ರ ಜಾರಿ
ಇದ್ದಕ್ಕಿದ್ದಂತೆ ಧೂಮಕೇತುವಿಗೆ ಡಿಕ್ಕಿ!
ಅರಗಿಸಿಕೊಳ್ಳಲು ಆಗದಷ್ಟು
ಅನಿರೀಕ್ಷಿತ ಆಘಾತ !
ನೋವಿನ ಮಳೆ, ಕಂಬನಿಯ ಹೊಳೆ !

ವಯದ ಗೆರೆ ಉದ್ದಕ್ಕೂ ಮೀರಿದ
ಸಾಧನಾ ಲಯ ಅನುಕರಣೀಯ !

ಅಂತ್ಯವಿಲ್ಲದ ಸಂತೆಯಲ್ಲಿ
ಅಮರ ನೆನಪಿನ ಅಮೂಲ್ಯ ರತ್ನ !
ಯುವಶಕ್ತಿಯ ಆರಾಧ್ಯ ದೈವ
ಆಬಾಲವೃದ್ಧರಿಗೂ ಅಚ್ಚುಮೆಚ್ಚಿನ 'ಅಪ್ಪು'
ಅಕಾಲಿಕ ಸಾವಿನ ದವಡೆಗೆ ಸಿಲುಕಿ
ಮರೆಯಾದ ಕನ್ನಡದ ಮುದ್ದಿನ ಕಣ್ಮಣಿಯೇ !'

ಓ ದೇವರೇ
ಸದ್ವಿನೀತ ಪುನೀತನ ಈ ಸಾವು ನ್ಯಾಯವೇ...!?!?

**- ಮಹಾಂತೇಶ್.ಬಿ.ನಿಟ್ಟೂರ್,**
ದಾವಣಗೆರೆ.

## ಪಟಾಕಿ ನಿಷೇಧಕ್ಕೆ ಆಕ್ಷೇಪ

**(1ನೇ ಪುಟದಿಂದ)** ಎನ್ನುತ್ತಾರೆ ಎಂದಿರುವ ಅವರು, ಪಟಾಕಿ ನಿಷೇಧದ ಬಗ್ಗೆ ಕೊನೆಯ ಹಂತಗಳಲ್ಲಿ ತೆಗೆದುಕೊಳ್ಳುವ ನಿರ್ಧಾರಗಳ ವಿರುದ್ಧ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪರಿಸರ ಮಾಲಿನ್ಯ ವಿಷಯ ನಿಜಕ್ಕೂ ಮಹತ್ವದ್ದಾಗಿದೆ. ಆದರೆ ಪಟಾಕಿ ತಯಾರಕರ ಜೀವನದ ಬಗ್ಗೆಯೂ ಚಿಂತನೆ ಮಾಡಬೇಕಲ್ಲವೇ? ಪಟಾಕಿ ನಿಷೇಧ ಮಾಡಿದರೆ ಆ ಕಾರ್ಮಿಕರು ಏನು ಮಾಡುತ್ತಾರೆ? ಅವರ ಪುನರ್ವಸತಿಗೆ ಏನು ದಾರಿಗಳಿವೆ? ಈ ಎಲ್ಲವುಗಳ ಬಗ್ಗೆಯೂ ಚಿಂತನೆ ಮಾಡಬೇಕಲ್ಲವೇ? ಎಂದು ಪ್ರಶ್ನಿಸಿದ್ದಾರೆ.

## ಇಂದು ರಾಜ್ಯಮಟ್ಟದ ವೇಟ್ ಲಿಫ್ಟಿಂಗ್ ಸ್ಪರ್ಧೆ ಉದ್ಘಾಟನೆ

ಕರ್ನಾಟಕ ರಾಜ್ಯ ವೇಟ್ ಲಿಫ್ಟಿಂಗ್ ಅಸೋಸಿಯೇಷನ್, ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ಹಾಗೂ ಮಹಾನಗರ ಪಾಲಿಕೆ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಮತ್ತು ನಾಳೆ ಎರಡು ದಿನಗಳ ಕಾಲ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ 3 ನೇ ಬಾರಿ ರಾಜ್ಯಮಟ್ಟದ ಹಿರಿಯರ, ಕಿರಿಯರ, ಮಹಿಳೆಯರ, ಪುರುಷರ, ಬಾಲಕ ಮತ್ತು ಬಾಲಕಿಯರ ವೇಟ್ ಲಿಫ್ಟಿಂಗ್ ಸ್ಪರ್ಧೆ ನಡೆಯಲಿದೆ.

ಬೆಳಿಗ್ಗೆ 11 ಗಂಟೆಗೆ ಶಾಸಕ ಎಸ್.ಎ. ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸುವರು. ಅಸೋಸಿಯೇಷನ್ ಗೌರವಾಧ್ಯಕ್ಷ ಕೆ.ಎಂ. ವೀರೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವ ಕೆ.ಸಿ. ನಾರಾಯಣಗೌಡ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಬಿಜೆಪಿ ಮುಖಂಡರಾದ ಯಶವಂತರಾವ್ ಜಾಧವ್, ಜಿ.ಎಸ್. ಅನಿತ್ ಕುಮಾರ್, ಉಪ ಮೇಯರ್ ಶಿಲ್ಪಾ ಜಯಪ್ರಕಾಶ್ ಮತ್ತಿತರರು ಭಾಗವಹಿಸಲಿದ್ದಾರೆ.

## ನೇಮಕಾತಿ ಪರೀಕ್ಷಾ ತರಬೇತಿಗೆ ಆಯ್ಕೆ ಪರೀಕ್ಷೆ

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಯುಪಿಎಸ್‌ಸಿ, ಕೆಎಎಸ್, ಗ್ರೂಪ್-ಸಿ, ಎಸ್‌ಎಸ್‌ಸಿ, ಬ್ಯಾಂಕಿಂಗ್, ಆರ್‌ಆರ್‌ಬಿ ಹುದ್ದೆಗಳಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಾಲ್ಗೊಳ್ಳಲು ಬಯಸುವವರಿಗೆ ತರಬೇತಿ ನೀಡುವ ಸಲುವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಇಂದು ದಾವಣಗೆರೆಯ 7 ಪರೀಕ್ಷಾ ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆ ನಡೆಯಲಿದ್ದು, ಸೂಕ್ತ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಸೂಚನೆ ನೀಡಿದ್ದಾರೆ.

ಜಿಲ್ಲಾಡಳಿತ ಭವನದ ಅಪರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಿದ್ಧತಾ ಸಭೆಯಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ನಗರದಲ್ಲಿ ಒಟ್ಟು 7 ಪರೀಕ್ಷಾ ಕೇಂದ್ರಗಳಿದ್ದು, 3072 ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಗೆ ಹಾಜರಾಗಲಿದ್ದಾರೆ. ಪರೀಕ್ಷೆಯು ಅ.31 ರಂದು ಬೆಳಿಗ್ಗೆ 10.30 ರಿಂದ 12.30 ಮತ್ತು ಮಧ್ಯಾಹ್ನ 2.30 ರಿಂದ 4.30 ರವರೆಗೆ ನಡೆಯಲಿದೆ ಎಂದರು. ಕೋವಿಡ್ ಗುಣಲಕ್ಷಣಗಳು ಕಂಡು ಬರುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಪರೀಕ್ಷಾ ಕೊಠಡಿಗಳ ವ್ಯವಸ್ಥೆ ಮಾಡಬೇಕು ಎಂದು ಎಲ್ಲಾ ಕಾಲೇಜು ಪ್ರಾಂಶುಪಾಲರಿಗೆ ಸೂಚನೆ ನೀಡಿದರು. ಉಪವಿಭಾಗಾಧಿಕಾರಿ ಮಮತ ಹೊಸಗೌಡರ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ರೇಷ್ಮಕೌಸರ್, ಡಿಡಿಪಿಯು ಶಿವರಾಜ್, ಬಿಇಒ ಮತ್ತು ಬಿಎಸ್‌ಡಬ್ಲ್ಯೂ ಅಧಿಕಾರಿಗಳು, ದೂಡಾ ಅಧಿಕಾರಿಗಳು ಹಾಗೂ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ನೇಮಿಸಿರುವ ಕಾಲೇಜು ಮುಖ್ಯಸ್ಥರು ಉಪಸ್ಥಿತರಿದ್ದರು.

## ರಾಜ್ಯೋತ್ಸವ ಪ್ರಶಸ್ತಿ ಅನುಮಾನ

**(1ನೇ ಪುಟದಿಂದ)** ನಂತರ ಗಣ್ಯರಿಗೆ ಮಾಹಿತಿ ನೀಡಿ, ಪ್ರಶಸ್ತಿ ಸ್ವೀಕರಿಸಲು ಆಹ್ವಾನಿಸಬೇಕು. ಇದಕ್ಕೆ ಕಾಲಾವಕಾಶ ಬೇಕಿರುವುದರಿಂದ ಒಂದು ದಿನ ಬಾಕಿ ಇರುವಾಗಲೇ ಇದು ಸಾಧ್ಯವಾಗದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಗಳು ತಿಳಿಸಿವೆ. ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳು ಸರಳವಾಗಿ ಆಚರಣೆಯಾಗಲಿವೆ. ಅಂದು ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಬೇಕಿದ್ದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮುಂದೂಡುವ ಸಾಧ್ಯತೆ ಕಂಡು ಬಂದಿದೆ. ಈ ಮಧ್ಯೆ ಅಕಾಲಿಕ ಮರಣಕ್ಕೆ ತುತ್ತಾದ ಪುನೀತ್ ರಾಜ್‌ಕುಮಾರ್ ಅವರಿಗೂ ಮರಣೋತ್ತರ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕೆಂದು ಚಿತ್ರನಟ ಹಾಗೂ ರಾಜಕಾರಣಿ ಜಗ್ಗೇಶ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

# ದಲಿತರ ಮೇಲೆ ಹಲ್ಲೆ : ಸೂಕ್ತ ಕ್ರಮಕ್ಕೆ ಹೆಚ್. ದುಗ್ಗಪ್ಪ ಆಗ್ರಹ

ದಾವಣಗೆರೆ, ಅ.30 - ಹೊನ್ನಾಳಿ ತಾಲ್ಲೂಕಿನ ಕೆಂಚಿಕೊಪ್ಪ ಗ್ರಾಮದಲ್ಲಿ ದಲಿತರ ಮೇಲೆ ನಡೆದಿರುವ ಮಾರಣಾಂತಿಕ ಹಲ್ಲೆ ಖಂಡನೀಯವಾಗಿದ್ದು, ಕೂಡಲೇ ಕ್ರಮವಹಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಂತೆ ಕೆಪಿಸಿಸಿ ಸದಸ್ಯ ಹೆಚ್. ದುಗ್ಗಪ್ಪ ಆಗ್ರಹಿಸಿದ್ದಾರೆ.

ತುಗ್ಗಲಹಳ್ಳಿ ಗ್ರಾಮಸ್ಥರು ಕೆಂಚಿಕೊಪ್ಪ ಗ್ರಾಮದ ದಲಿತರ ಜಮೀನಿನಲ್ಲಿ ಬೆಳೆದ ಮೆಕ್ಕೆಜೋಳ ಸೇರಿದಂತೆ ಇತರೆ ಪೈರುಗಳನ್ನು ಹಾಳು ಮಾಡಿ, ಮಾರಣಾಂತಿಕ ಹಲ್ಲೆ ನಡೆಸಿರುವುದು ಖಂಡನೀಯ ಎಂದರು.

ದಲಿತ ಕುಟುಂಬದ 13 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದೊಂದು ದೊಡ್ಡ ದುರಂತ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ದಲಿತ ಕುಟುಂಬಗಳಿಗೆ ಅನ್ಯಾಯ ಮಾಡಿದವರ ವಿರುದ್ಧ ಕಠಿಣ ಕ್ರಮಗೊಳ್ಳದಿದ್ದರೆ ದಲಿತರು ದಂಗೆ ಏಳುವುದನ್ನು ನಿಲ್ಲಿಸಲು ಸಾಧ್ಯವಿಲ್ಲ. ವರ್ಷಪೂರ್ತಿ ಬೆಳೆದ ಬೆಳೆಗಳನ್ನು ಹಾಳು ಮಾಡಿದ್ದಲ್ಲದೇ, ಅವರ ಮೇಲೆ ಹಲ್ಲೆ ನಡೆಸಿರುವುದು ವಿಷಾದನೀಯ. ಬಡ ರೈತರನ್ನು ಈ ರೀತಿ ಮಾರಕಾಸ್ತ್ರಗಳಿಂದ ಥಳಿಸಿದರೆ ಅವರ ಜೀವಕ್ಕೆ ಯಾರು ಹೊಣೆ ಎಂದು ಪ್ರಶ್ನಿಸಿದ್ದಾರೆ.

ಈ ಕೂಡಲೇ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರು ತಕ್ಷಣ ಕ್ರಮಕ್ಕೆ ಗೊಂಡು, ನೊಂದ ದಲಿತರಿಗೆ ಸಾಂತ್ವನ ಹೇಳಿ, ಚಿಕಿತ್ಸೆಗೆ ಸಹಾಯ ಮಾಡಬೇಕು. ಪ್ರಕರಣವನ್ನು ನ್ಯಾಯಯುತವಾಗಿ ಇತ್ಯರ್ಥಪಡಿಸಬೇಕು, ಜಮೀನು ಉಳುಮೆ ಮಾಡುತ್ತಿದ್ದವರಿಗೆ ಸಾಗುವಳಿ ಹಕ್ಕುಪತ್ರ ನೀಡಬೇಕು, ಜತೆಗೆ ತಪ್ಪಿತಸ್ಥರನ್ನು ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದ್ದಾರೆ.




॥ ಶ್ರೀ ಯಲವಟ್ಟಿ ಆಂಜನೇಯ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**

ಶ್ರೀ ಶ್ರೀ ಹಾಲಸ್ವಾಮಿಗಳು ಹಿರೇಹಡಗಲಿ ಇವರ ಸಾನ್ನಿಧ್ಯದಲ್ಲಿ
ದಾವಣಗೆರೆ ಸಿಟಿ ಹಗೇದಿಬ್ಬ ಸರ್ಕಲ್ ಹತ್ತಿರ ಬೊಮ್ಮಲಿಂಗಯ್ಯನ ಗಲ್ಲಿ ವಾಸಿ
**ಶ್ರೀ ಯಲವಟ್ಟಿ ಮಂಜುನಾಥ ಮತ್ತು ಸಹೋದರರು**
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ 16.10.2021ನೇ ಶನಿವಾರ ಬೆಳಗ್ಗೆ 10.20ಕ್ಕೆ ನಮ್ಮ ಮಾತೃಶ್ರೀಯವರಾದ
**ಶ್ರೀ ಯಲವಟ್ಟಿ ನೀಲಮ್ಮನವರು**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 31.10.2021ನೇ ಭಾನುವಾರ ಬೆಳಗ್ಗೆ 11.30ಕ್ಕೆ ದಾವಣಗೆರೆ ಸಿಟಿ ಶಿವಾಜಿ ಸರ್ಕಲ್, ನಗರ ದೇವತೆ ಶ್ರೀದುರ್ಗಾಂಬಿಕ ದೇವಸ್ಥಾನದ ಎದುರುಗಡೆ ಇರುವ ಶ್ರೀ ನಿಮಿಷಾಂಬ ಕಲ್ಯಾಣ ಮಂಟಪದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ದಿ. ಯಲವಟ್ಟಿ ನಿಂಗಪ್ಪ ಇವರ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಯಲವಟ್ಟಿ ವಂಶಸ್ಥರು ಹಾಗೂ ಬಂಧು-ಮಿತ್ರರು.



**ದ್ವಿತೀಯ ವರ್ಷದ ಪುಣ್ಯಸ್ಮರಣೆ**



ದಿ॥ ಶ್ರೀಮತಿ ಕಮಲಮ್ಮ (ನೀಲಮ್ಮ)
w/o ಎಂ. ಬಸಪ್ಪ, ನಿವೃತ್ತ ಮ್ಯಾನೇಜರ್ ಎಸ್.ಬಿ.ಎಂ.

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ

ಶ್ರೀಮತಿ ವೀಣಾ ಶ್ರೀ ಮುದ್ದಿ ವಿಜಯ್ ಮತ್ತು ಮಕ್ಕಳು
ಶ್ರೀಮತಿ ಶಶಿಕಲಾ ಶ್ರೀ ಬಸವರಾಜ ಶಿರಿಗೂರು ಮತ್ತು ಮಕ್ಕಳು
ಶ್ರೀಮತಿ ಇಂದುಮತಿ ಶ್ರೀ ಗಣೇಶ್ ತಾಳದ ಮತ್ತು ಮಕ್ಕಳು
ಕು॥ ಶೀಲಾ, ದಾವಣಗೆರೆ.
ಶ್ರೀಮತಿ ಸುಧಾ ಶ್ರೀ ಮೋಹನ್ ಹಡಗಲಿ, ಬ್ಯಾಡಗಿ ಮತ್ತು ಮಕ್ಕಳು.
ಶ್ರೀಮತಿ ರಾಜೇಶ್ವರಿ ಶ್ರೀ ರಂಗನಾಥ್ ಮತ್ತು ಮಕ್ಕಳು.



**ಪ್ರಥಮ ವರ್ಷದ ಪುಣ್ಯಸ್ಮರಣೆ**



**ದಿ॥ ಬಂಡೇರ ರಾಜಣ್ಣ,** ಮಾಜಿ ಪ್ರಧಾನರು ಹಾಗೂ ಮಾಜಿ ನಿರ್ದೇಶಕರು, ಎ.ಪಿ.ಎಂ.ಸಿ. ಹಿರಿಯ ಮುಖಂಡರು, ಜಗಳೂರು ವಿಧಾನಸಭಾ ಕ್ಷೇತ್ರ.

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು... ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ತೋರಿಸಿದ ಹಾದಿಯಲ್ಲಿ ಮುನ್ನಡೆಯುತ್ತಿರುವ ನಿಮ್ಮ ಕುಟುಂಬ ವರ್ಗದವರು...

ಪತ್ನಿ : ಶ್ರೀಮತಿ ಗೌರಮ್ಮ ರಾಜಣ್ಣ, ಮಕ್ಕಳಾದ : ಕಮಲಾಕ್ಷಿ ವೀರೇಶ್ ಉಷಾ ಪ್ರವೀಣ್, ಮೊಮ್ಮಕ್ಕಳಾದ : ಅನನ್ಯ, ರಾಜಶ್ರೀ, ವರುಣ್ ಮತ್ತು ಸಹೋದರರು, ಸಹೋದರಿಯರು, ಅಳಿಯಂದಿರು, ಬಂಡೇರ ವಂಶಸ್ಥರು, ದೇವಿಕೆರೆ ಗ್ರಾಮಸ್ಥರು

**ಪ್ರವೀಣ ಕುಮಾರ್ ಬಿ.ಬಿ. ದೇವಿಕೆರೆ**
ಯುವ ಮುಖಂಡರು, ಜಗಳೂರು., 7349484341


## ಬಸವಂತರಾವ್ ಗುಜ್ಜರ್ ನಿಧನ



ದಾವಣಗೆರೆ ತಾಲ್ಲೂಕು, ಕಕ್ಕರಗೊಳ್ಳ ಗ್ರಾಮದ ವಾಸಿ ಬಸವಂತರಾವ್ ಗುಜ್ಜರ್ (71) ಅವರು ದಿನಾಂಕ 30.10.2021ರ ಶನಿವಾರ ಬೆಳಿಗ್ಗೆ 11-30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.10.2021ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಸ್ವಗ್ರಾಮ ಕಕ್ಕರಗೊಳ್ಳದಲ್ಲಿ ನೆರವೇರಲಿದೆ.

## ಶಾಂತ ಶಿವರಾಜ್ ಅಂಗಡಿ ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ 'ಎ' ಬ್ಲಾಕ್, 10ನೇ ಕ್ರಾಸ್, ಅಥಣಿ ಕಾಲೇಜು ರಸ್ತೆ ವಾಸಿ ದಿ.ಶಿವರಾಜ್ ಬಸಪ್ಪ ಅಂಗಡಿ ಇವರ ಧರ್ಮಪತ್ನಿ ಶ್ರೀಮತಿ ಶಾಂತ ಶಿವರಾಜ್ ಅಂಗಡಿ (69) ಇವರು ದಿನಾಂಕ 30.10.2021ರ ಶನಿವಾರ ರಾತ್ರಿ 11.25ಕ್ಕೆ ನಿಧನ ರಾದರು. ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.10.2021ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಪುಣ್ಯಕೋಟಿ ಮಠದಲ್ಲಿ ಇಂದು ಸಭೆ

ಹರಿಹರ ಸಮೀಪವಿರುವ ಕುಮಾರಪಟ್ಟಣಂ ಪುಣ್ಯಕೋಟಿ ಮಠವು ಹಿಂದೂ ವಿರಾಟ್ ಸಾಧು, ಸಂತ ಸಮಾವೇಶವನ್ನು ಹಮ್ಮಿಕೊಳ್ಳಲಿದ್ದು, ಈ ಸಂಬಂಧ ಶ್ರೀ ಮಠದ ಆವರಣದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಸಭೆ ಕರೆಯಲಾಗಿದೆ ಎಂದು ಮಠದ ಶ್ರೀ ಜಗದೀಶ್ವರ ಸ್ವಾಮೀಜಿ ತಿಳಿಸಿದ್ದಾರೆ.

ಎರಡು ದಿನಗಳ ಕಾಲ ಜರುಗುವ ಸಮಾರಂಭಕ್ಕೆ ಜಗದೀಶ್ ಕಾರಂತ ಜೀ, ಡಾ. ಕಲ್ಲಡ್ಕ ಪ್ರಭಾಕರ ಭಟ್ ಸೇರಿದಂತೆ ನಾಡಿನ ಹಿರಿಯ ಮಠಾಧೀಶರನ್ನು ಆಮಂತ್ರಿಸಿ, ಧರ್ಮ ಜಾಗೃತಿ ಮಾಡುವ ಉದ್ದೇಶ ಸಮಾವೇಶದ್ದಾಗಿದೆ ಎಂದು ಶ್ರೀಗಳು ತಿಳಿಸಿದ್ದಾರೆ.

## ಸಿಂಧಗಿ : ಶಾಂತಿಯುತ ಮತದಾನ

ಬೆಂಗಳೂರು, ಅ. 30 – ಸಿಂಧಗಿ ಹಾಗೂ ಹಾನಗಲ್ ವಿಧಾನಸಭಾ ಕ್ಷೇತ್ರಗಳಿಗೆ ಶಾಂತಿಯುತವಾಗಿ ಮತದಾನ ನಡೆದಿದೆ.

ಸಿಂಧಗಿಯಲ್ಲಿ ಶೇ.69.41 ಹಾಗೂ ಹಾನಗಲ್‌ನಲ್ಲಿ ಶೇ.83.44ರಷ್ಟು ಮತದಾನವಾಗಿದೆ. ಸಣ್ಣ ಪುಟ್ಟ ಘಟನೆಗಳನ್ನು ಹೊರತು ಪಡಿಸಿದರೆ ಮತದಾನ ಬಹುತೇಕ ಶಾಂತಿಯುತವಾಗಿದೆ. ನವೆಂಬರ್ 2ರಂದು ಎರಡೂ ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ.

# ಕಷ್ಟಗಳಿದ್ದಾಗಲೇ ಬದುಕು ಚೈತನ್ಯ ಪೂರ್ಣ

## ಹೊನ್ನಾಳಿ ಹಿರೇಕಲ್ಮಠದ ಒಡೆಯರ್ ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ

ದಾವಣಗೆರೆ, ಅ.30- ಜೀವನದಲ್ಲಿ ಕಷ್ಟಗಳು ಸಹಜ. ಅವುಗಳನ್ನು ಅನುಭವಿಸಿದಾಗ ಮಾತ್ರ ಬದುಕು ಚೈತನ್ಯಪೂರ್ಣ ಹಾಗೂ ಸುಂದರವಾಗಿರಲು ಸಾಧ್ಯ ಎಂದು ಹೊನ್ನಾಳಿ ಹಿರೇಕಲ್ಮಠದ ಒಡೆಯರ್ ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ನುಡಿದರು.



ನಗರದ ಮಾಗನೂರು ಬಸಪ್ಪ ಶಾಲಾ ಆವರಣದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಆರೂಢ ದಾಸೋಹಿ ಮಾಗನೂರು ಬಸಪ್ಪ ಅವರ 26ನೇ ಪುಣ್ಯಸ್ಮರಣೆ ಹಾಗೂ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಅವರ 13ನೇ ಸಂಸ್ಮರಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಜೀವನದಲ್ಲಿ ತೀವ್ರ ಕಷ್ಟಗಳ ನಡುವೆಯೂ ಒಬ್ಬ ವ್ಯಕ್ತಿ ಏನೆಲ್ಲಾ ಮಾಡಬಹುದು ಎನ್ನುವುದಕ್ಕೆ ಮಾಗನೂರು ಬಸಪ್ಪ ಅವರು ಉತ್ತಮ ಉದಾಹರಣೆ. ಅವರು ಕೇವಲ ತನಗಾಗಿ ಬದುಕದೇ ಕುಟುಂಬಕ್ಕಾಗಿ ಬದುಕದೇ ಅನ್ಯರ ಬದುಕಿಗೆ ಮಿಡಿಯುತ್ತಿದ್ದ ವಸುದೈವ ಕುಟುಂಬಕಂ ಎನ್ನುವ ಉದಾತ್ತ ಚಿಂತನೆಯನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದರು ಎಂದು ಶ್ರೀಗಳು ಸ್ಮರಿಸಿದರು.

ಮಾಗನೂರು ಬಸಪ್ಪ ಅವರು ಸಂಘ ಸಂಸ್ಥೆಗಳಿಗೆ ನೀಡಿದ ಕೊಡುಗೆ ಅಪಾರವಾದದ್ದು. ಅಷ್ಟೇ ಅಲ್ಲದೆ, ಗಣ್ಯರಿಗೆ ಸನ್ಮಾನ, ದತ್ತಿನಿಧಿಗೆ ಹಣ ನೀಡಿದ್ದು, ಅವರ ಜೀವನ ಚರಿತ್ರೆಯನ್ನು ಸಾರ್ಥಕಗೊಳಿಸುತ್ತದೆ. ಮಕ್ಕಳು ಉತ್ತಮ ಜೀವನ ಶೈಲಿಯನ್ನು ಅಳವಡಿಸಿಕೊಂಡು ಶಾಲೆಗೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು.

ಇಂದಿನ ಮಕ್ಕಳಿಗೆ ತಂದೆ–ತಾಯಿಗಳೇ ಆದರ್ಶರಾಗಿರುತ್ತಾರೆ. ಆದರೆ ಮಾಗನೂರು ಬಸಪ್ಪನವರು ಬಾಲ್ಯದಲ್ಲಿಯೇ ತಂದೆ ತಾಯಿಯನ್ನು ಕಳೆದುಕೊಂಡಿದ್ದರು. ಬದುಕಿನಲ್ಲಿ ಕಷ್ಟ–ಸುಖ ಎರಡನ್ನೂ ಸಮಾನವಾಗಿ ಸ್ವೀಕರಿಸಿದ್ದರು. ಅವರ ಆದರ್ಶಗಳು, ಚಿಂತನೆಗಳನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಳ್ಳಬೇಕಾಗಿರುವುದು ಅತ್ಯಗತ್ಯವಾಗಿದೆ ಎಂದರು.

**ಆರೂಢ ದಾಸೋಹಿ ಮಾಗನೂರು ಬಸಪ್ಪ ಅವರ 26ನೇ ಪುಣ್ಯಸ್ಮರಣೆ ಹಾಗೂ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಅವರ 13ನೇ ಸಂಸ್ಮರಣೆ ಕಾರ್ಯಕ್ರಮ**

ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಜಿಲ್ಲಾಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಮಾತನಾಡುತ್ತಾ, ಸಮಾಜದಲ್ಲಿ ತಾನು ಬೆಳೆಯುವುದರ ಜೊತೆಗೆ ಸಮಾಜವನ್ನು ಬೆಳೆಸಬೇಕು. ಸಮ ಸಮಾಜ ನಿರ್ಮಿಸುವ, ಸಮಾನತೆ ಬೆಳೆಸುವ ವ್ಯಕ್ತಿ ಬೇಕು ಎಂದು ಈ ಹಿಂದೆ ತತ್ವಜ್ಞಾನಿ ಕಾರ್ಲ್ ಮಾರ್ಕ್ಸ್ ಹೇಳಿದ್ದರು. ಅಂತಹ ವ್ಯಕ್ತಿ ಮಾಗನೂರು ಬಸಪ್ಪನವರು ಎಂದರು.

ಜಗತ್ತಿನಲ್ಲಿ ಮನುಷ್ಯನಾಗಿ ಹುಟ್ಟುವುದು ಮುಖ್ಯವಲ್ಲ. ಮನುಷ್ಯನಾಗಿ ಬಾಳುವುದು ಮುಖ್ಯ. ಅದನ್ನು ಕಲಿಯಬೇಕು. ಮನುಷ್ಯನಾಗಿ ಬಾಳದಿದ್ದರೆ ಅದು ಬದುಕಲ್ಲ. ಯಾವುದು ಶಾಶ್ವತವಲ್ಲವೋ ಅದು ಬದುಕಲ್ಲ ಎಂದು ಹೇಳಿದರು.

ಅರುಣಕುಮಾರಿ ಬಿರಾದಾರ ನುಡಿ ನಮನ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಮಕ್ಕಳ ತಜ್ಞರಾದ, ಡಾ. ಸುರೇಶ್ ಬಾಬು, ಡಾ. ಶೋಭಾ ಬಾಣಾಪುರ ಮಠ, ಆನಗೋಡಿನ ಯೋಧ ಕೆ. ಎಚ್. ಈಶ್ವರಪ್ಪ ಅವರನ್ನು ಸನ್ಮಾನಿಸಲಾಯಿತು.

ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಅಧ್ಯಕ್ಷ ಎಂ.ಬಿ. ಚನ್ನಬಸವನಗೌಡರು ಅಧ್ಯಕ್ಷತೆ ವಹಿಸಿದ್ದರು. ಮಾಗನೂರು ಬಸಪ್ಪ ಅವರ ಮರಿಮೊಮ್ಮಗಳು ಅನ್ನಪೂರ್ಣ ವಿ.ಕೊಂಡಜ್ಜಿ ಶಿವತಾಂಡವ ನೃತ್ಯ ಪ್ರದರ್ಶಿಸಿದರು. ಆರಂಭದಲ್ಲಿ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರಭುದೇವ ಎಂ.ಆರ್. ಪ್ರಾರ್ಥಿಸಿದರು. ಎ.ಎಸ್.ಕುಸುಮ ಮಾಗನೂರು ಬಸಪ್ಪನವರ ಹೆಸರಿನಲ್ಲಿ ಕೊಡಮಾಡುವ ದತ್ತಿಗಳ ವಿವರ ಓದಿದರು. ಡಾ.ಪ್ರಸಾದ್ ಬಂಗೇರ ಅವರನ್ನು ಸನ್ಮಾನಿಸಲಾಯಿತು.




ರಾಜ್ಯವೂ ಸೇರಿದಂತೆ ದಾವಣಗೆರೆ ಜಿಲ್ಲೆಯಾದ್ಯಂತ ಪುನೀತ್ ರಾಜ್ ಕುಮಾರ್ ಅಗಲಿಕೆಯಿಂದಾಗಿ ಅಭಿಮಾನಿಗಳು ದುಃಖಿತರಾಗಿದ್ದು, ಎರಡನೇ ದಿನವೂ ಶ್ರದ್ಧಾಂಜಲಿ ಸಲ್ಲಿಸಲು ನಗರದ ಅಕ್ಕ ಪಕ್ಕ ಗ್ರಾಮಗಳ ಜನತೆ ಪುನೀತ್ ಅವರ ಫ್ಲೆಕ್ಸ್‌ಗಳನ್ನು ಕೊಂಡೊಯ್ಯುತ್ತಿದ್ದುದು ಕಂಡು ಬಂತು. ಕಾರಿಗನೂರು ಗ್ರಾಮದ ವ್ಯಕ್ತಿಯೋರ್ವ ಬೈಕ್‌ನಲ್ಲಿ ಫ್ಲೆಕ್ಸ್ ಕೊಂಡೊಯ್ಯುತ್ತಿರುವುದು.

# ಬೆಳಕಿನ ಹಬ್ಬವು ಅರ್ಥಪೂರ್ಣವಾಗಿರಲಿ

## ಸುರಕ್ಷಾ ದೀಪಾವಳಿ ಜಾಗೃತಿ ಅಭಿಯಾನದಲ್ಲಿ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ

ದಾವಣಗೆರೆ, ಅ.30- ಮನೆ - ಮನೆಗಳಲ್ಲಿ ದೀಪಗಳ ಹಚ್ಚಿ ಜ್ಞಾನವೆಂಬ ಜ್ಯೋತಿ ಬೆಳಗಿಸುತ್ತಾ ಬೆಳಕಿನ ಹಬ್ಬ ದೀಪಾಳಿಯನ್ನು ಅರ್ಥಪೂರ್ಣ ಮತ್ತು ಆರೋಗ್ಯಕರವಾಗಿ ಆಚರಿಸೋಣ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ಕರೆ ನೀಡಿದರು.




ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಸೇಂಟ್ ಜಾನ್ಸ್ ಪ್ರೌಢಶಾಲೆಯಲ್ಲಿ ಪರಿಸರ ಸಂರಕ್ಷಣಾ ವೇದಿಕೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಅಮೃತ ಯುವಕ ಸಂಘ ಇವುಗಳ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ ಸುರಕ್ಷಾ ದೀಪಾವಳಿ ಜಾಗೃತಿ ಅಭಿಯಾನದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ದೀಪಾವಳಿ ಕೇವಲ ಪಟಾಕಿಗಳಿಂದ ಆಚರಣೆ ಮಾಡುವಂತಹದ್ದಲ್ಲ. ಮನೆಯಲ್ಲಿ ದೀಪದ ಬೆಳಕು ಹಾಗೂ ಮನಗಳಲ್ಲಿ ಜ್ಞಾನದ ಬೆಳಕು ಚೆಲ್ಲುವುದೇ ದೀಪಾವಳಿ ಸಂಭ್ರಮವಾಗಬೇಕೇ ಹೊರತು, ಪಟಾಕಿ ಹಚ್ಚಿ ಬಾಳಲ್ಲಿ ಕತ್ತಲು ಕಾಣುವಂತಾಗ ಬಾರದು. ಸರ್ಕಾರ ಹಸಿರು ಪಟಾಕಿಗೆ ಅನುಮತಿಸಿದೆ. ಆದರೆ, ಈ ಪಟಾಕಿಯನ್ನೂ ಸಹ ಹಚ್ಚಲು ಮುಂದಾಗಬಾರದು ಎಂದು ಹೇಳಿದರು.

ಕೊರೊನಾ ಎಂಬ ಮಹಾಮಾರಿ ನಮ್ಮ ದೇಶವನ್ನು ಬಿಟ್ಟು ಹೋಗಲಿ ಎಂಬ ಆಶಯದೊಂದಿಗೆ ಪಟಾಕಿಗಳನ್ನು ಬಿಟ್ಟು ಎಲ್ಲರ ಮನೆಗಳಲ್ಲೂ ಹಣತೆಗಳನ್ನು ಬೆಳಗಿಸುವುದರ ಮೂಲಕ ನಮಗೂ ಹಾಗೂ ಸುತ್ತಲೂ ಇರುವ ಪ್ರಾಣಿ ಪಕ್ಷಿ ಹಾಗೂ ನಮ್ಮ ಹಿರಿಯರಿಗೂ ತೊಂದರೆಯಾಗದ ರೀತಿ ದೀಪಾವಳಿಯನ್ನು ಅತ್ಯಂತ ಶ್ರದ್ಧಾ, ಭಕ್ತಿಯಿಂದ ಅರ್ಥಪೂರ್ಣವಾಗಿ ಆಚರಿಸೋಣವೆಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ದಾವಣಗೆರೆ ಗೌರವಾಧ್ಯಕ್ಷ ಜೆ.ಬಿ. ರಾಜು, ಪಟಾಕಿ ಹಚ್ಚುವುದರಿಂದ ಪ್ರತಿ ವರ್ಷವೂ ಹಲವಾರು ಮಕ್ಕಳ ಪ್ರಾಣಕ್ಕೆ ಅಪಾಯ ಬಂದಿದೆ. ಕಣ್ಣುಗಳನ್ನು ಕಳೆದುಕೊಂಡು ಬಾಳೇ ಕತ್ತಲೆಯಂತಾಗಿದೆ. ಆದ್ದರಿಂದ ಮಕ್ಕಳು ಅತೀ ಸಣ್ಣ ಹೊಗೆ ರಹಿತ ಹಸಿರ ಪಟಾಕಿಗಳನ್ನು ಮಾತ್ರ ಹಚ್ಚಬೇಕು ಎಂದರು

ಪಟಾಕಿಗಳನ್ನು ಸಿಡಿಸುವಾಗ ಕಣ್ಣಿಗೆ ತೊಂದರೆಯಾಗದ ರೀತಿ, ಹೆಚ್ಚಿನ ಹೊಗೆ ರಹಿತವಾದ, ಅಪಾಯಕಾರಿ ಅಲ್ಲದ ಪಟಾಕಿಗಳನ್ನು ಮಾತ್ರ ಬಳಸಬೇಕು ಎಂದು ಸಲಹೆ ನೀಡಿದರು.

ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ಚಂದ್ರಶೇಖರ್ ಸುಂಕದ್, ಯಾವುದೇ ಹಬ್ಬ ಆಚರಣೆಗಳು ಮಾಡಿದರೂ ಅದು ಪರಿಸರಕ್ಕೆ ಪೂರಕವಾಗಿರಬೇಕು. ಪಟಾಕಿ ಸಿಡಿಸುವುದರಿಂದ ಕೇವಲ ಮನುಷ್ಯನಿಗಷ್ಟೆ ಅಲ್ಲದೇ ಪ್ರಾಣಿ, ಪಕ್ಷಿ ಸಂಕುಲದ ಜೀವಕ್ಕೂ ಹಾನಿ. ಎಲ್ಲರಲ್ಲಿಯೂ ಉಸಿರಾಟದ ಸಮಸ್ಯೆ ಹೆಚ್ಚಾಗುತ್ತದೆ ಎಂದರು.

ಮಾಲಿನ್ಯ ನಿಯಂತ್ರಣ ಮಂಡಳಿಯ ಉಪ ಪರಿಸರ ಅಧಿಕಾರಿ ಜಿ.ಕೆ. ಸಂತೋಷ್ ಮಾತನಾಡಿ, ಪರಿಸರ ಸುಪ್ರಿಂ ಕೋರ್ಟ್ ನಿರ್ದೇಶನದಂತೆ ಈ ಬಾರಿ ಹಸಿರು ಪಟಾಕಿ ಮಾತ್ರ ಮಾರಾಟ ಮಾಡಲು ಅವಕಾಶ ನೀಡಿದ್ದು, ಇದನ್ನು ಉಲ್ಲಂಘಿಸಿ ಹಸಿರು ಪಟಾಕಿಯ ಹೆಸರಲ್ಲಿ ಬೇರೆ ಪಟಾಕಿ ಮಾರಾಟ ಮಾಡಿದವರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಇದೇ ವೇಳೆ ಸೇಂಟ್ ಜಾನ್ಸ್ ಶಾಲೆ ಸೇರಿದಂತೆ ಏಕಕಾಲಕ್ಕೆ ನೂರಾರು ಶಾಲೆಗಳಲ್ಲಿ ಸಾವಿರಾರು ಶಾಲಾ ಮಕ್ಕಳಿಂದ ಪರಿಸರಕ್ಕೆ ಮತ್ತು ಜೀವಕ್ಕೆ ಹಾನಿ ತರುವ ಪಟಾಕಿ ಬಿಟ್ಟು ಸುರಕ್ಷಿತ, ಅರ್ಥಪೂರ್ಣವಾಗಿ ದೀಪಾವಳಿ ಆಚರಿಸುವುದಾಗಿ ಪ್ರಮಾಣ ವಚನ ಸ್ವೀಕರಿಸಲಾಯಿತು.

ಚಲನಚಿತ್ರ, ನಟ ಪುನೀತ್ ರಾಜ್ ಕುಮಾರ್ ಅವರ ಅಗಲಿಕೆಗೆ ಮೌನಾಚರಿಸಿ, ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಸೇಂಟ್ ಜಾನ್ಸ್ ಸಿಬಿಎಸ್‌ಸಿ ಪ್ರೌಢಶಾಲೆಯ ಪ್ರಾಂಶುಪಾಲ ವಿ.ಎನ್. ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಸೇಂಟ್ ಜಾನ್ಸ್ ಕಾನ್ವೆಂಟ್ ಪ್ರಾಂಶುಪಾಲರಾದ ಜ್ಯೋತಿ ಎನ್. ಉಪಾಧ್ಯಾಯ, ಪರಿಸರ ಸಂರಕ್ಷಣಾ ವೇದಿಕೆಯ ಅಧ್ಯಕ್ಷ ಗಿರೀಶ್ ಎಸ್. ದೇವರಮನೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಕಾರ್ಯದರ್ಶಿ ಎಂ. ಗುರುಸಿದ್ದಸ್ವಾಮಿ, ಅಮೃತ ಯುವಕ ಸಂಘದ ಅಧ್ಯಕ್ಷ ಆರ್.ಬಿ. ಹನುಮಂತಪ್ಪಇದ್ದರು.

## ತಂಬಾಕು ನಿಯಂತ್ರಣ ಕೋಶದ ತಂಡದ ದಾಳಿ : 1500 ರೂ. ದಂಡ

ದಾವಣಗೆರೆ, ಅ.30- ನಗರದ ಆಜಾದ್ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಮುಖ್ಯ ರಸ್ತೆ, ರಸ್ತೆಯ ಸುತ್ತ-ಮುತ್ತ ಹೋಟೆಲ್ ಅಂಗಡಿ ಮಳಿಗೆ, ಪಾನ್‌ಶಾಪ್. ಬಾರ್ ಇತ್ಯಾದಿ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ದಾಳಿ ನಡೆಸಿರುವ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ತಂಡವು 15 ಪ್ರಕರಣಗಳನ್ನು ದಾಖಲಿಸಿ 1,500 ರೂ ದಂಡ ಸಂಗ್ರಹಿಸಿದೆ.

ತನಿಖಾ ತಂಡದಲ್ಲಿ ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಎಂ.ವಿ. ಹೊರಕೇರಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವೆಂಕಟಾಚಲ ಕುಮಾರ್, ಬಿ.ಹೆಚ್.ಇ.ಓ ಉಮಾಪತಿ, ಶ್ರೀಶೈಲಪ್ಪ ಶಿಕ್ಷಣ ಇಲಾಖೆ ಹಾಗೂ ಸತೀಶ್ ಕಲಹಾಳ್, ಸಮಾಜ ಕಾರ್ಯಕರ್ತ ದೇವರಾಜ್ ಕೆ.ಪಿ, ಪೊಲೀಸ್ ಎಎಸ್‌ಐ ಬಸವರಾಜಪ್ಪ, ಶಮೀಮ್ ಉನ್ನೀಸಾ ಇದ್ದರು.

## ಓ ಆತ್ಮವೇ ಓಗೊಟ್ಟೆಯಾಕೆ ಪರಮಾತ್ಮನ ಕರೆಗೆ

ಬಂದೆ ನೀ ಆಕಸ್ಮಿಕ
ಬಾಳಿದೆ ಸ್ವಾಭಾವಿಕ
ನೀನಿದ್ದೆ ಭಾವುಕ
ನಿನ್ನಗಲಿಕೆ ಯಾಕಿಷ್ಟು ಹೃದಯ
ವಿದ್ರಾವಕ!

ಬಿದ್ದಾಗ ಕುಗ್ಗಲಿಲ್ಲ
ಎದ್ದಾಗ ಹಿಗ್ಗಲಿಲ್ಲ
ಕಚ್ಚಾಡುವಾಗ ಜಗ್ಗಲಿಲ್ಲ
ನಗುವಲ್ಲಿ ಕಲ್ಮಷವೇ ಇಲ್ಲ.

ಅಜಾತ ರಾಜ ಅಂತ
ಕುಮಾರ ನೀ ಅಸ್ತಂಗತ
ನಿನ್ನ ನೆನಪು ಸದಾ ಇಂಗಿತ
ಹತ-ಓ-ಪುನೀತ
ನಿನಗಿದು ಸಮರ್ಪಿತ
ವೇಳೆ ಕಳೆಯಲಿ, ಚಿಂತನೆ
ಹರಡಲಿ
ನಿನಗಿದು ಕೊನೆಯ ಸುಪ್ರಭಾತ .

**- ಅರುಣ ಸಂಗಮೇಶ್**

## ಅಮೆರಿಕದಲ್ಲಿ ಭಾರತೀಯ ಮೂಲದ ಫಾರ್ಮಾ ಅಧಿಕಾರಿ ಹತ್ಯೆ

ನ್ಯೂಯಾರ್ಕ್, ಅ. 30 - ಅಮೆರಿಕದ ನ್ಯೂ ಜೆರ್ಸಿಯ ಫಾರ್ಮಾ ಕಂಪನಿಯೊಂದರ ಭಾರತೀಯ ಮೂಲದ ಉನ್ನತ ಅಧಿಕಾರಿಯನ್ನು ಹತ್ಯೆಗೈಯ್ಯಲಾಗಿದೆ. 54 ವರ್ಷದ ಶ್ರೀರಂಗ ಅರವಪಳ್ಳಿ ಅವರು ಪ್ಲೈನ್ಸ್‌ಬೋರೋ ನಿವಾಸಿಯಾಗಿದ್ದರು. ಅವರು ಕ್ಯಾಸಿನೋ ಒಂದರಿಂದ ಮನೆಗೆ ಮರಳಿದ್ದರು. ಅವರ ಬೆನ್ನತ್ತಿ ಬಂದ ದರೋಡೆಕೋರನೋರ್ವ ಹತ್ಯೆ ಮಾಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಅರವಪಳ್ಳಿ ಅವರು 10 ಸಾವಿರ ಡಾಲರ್ ಬಹುಮಾನ ಗೆದ್ದಿದ್ದರು. ಇದನ್ನು ನೋಡಿದ ಜೆಕೈ ರೀಡ್ - ಜಾನ್ ಎಂಬಾತ ದರೋಡೆಗಾಗಿ ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಆರೋಪಿಯನ್ನು ಬಂಧಿಸಲಾಗಿದೆ.

## ಪಂಚಮಸಾಲಿ ಸಮಾಜ : ಶ್ರದ್ಧಾಂಜಲಿ

ದಾವಣಗೆರೆ, ಅ.30- ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದಿಂದ ನಡೆದ ವಾರದ ಸಭೆಯಲ್ಲಿ ಕನ್ನಡ ಚಿತ್ರ ರಂಗದ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಹಾಗೂ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಜಿಲ್ಲಾ ಅಧ್ಯಕ್ಷ ಬಿ.ಸಿ. ಉಮಾಪತಿ, ಜಿಲ್ಲಾ ಕಾರ್ಯಾಧ್ಯಕ್ಷ ಬಿ. ಲೋಕೇಶ್, ಜಿಲ್ಲಾ ಉಪಾಧ್ಯಕ್ಷ ಎಂ.ದೊಡ್ಡಪ್ಪ, ನಗರ ಘಟಕದ ಅಧ್ಯಕ್ಷ ಕೈದಾಳ್ ಶಿವಶಂಕರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ಸಿ. ಕಾಶೀನಾಥ್, ಜಿಲ್ಲಾ ನೌಕರರ ಘಟಕ ಕಾರ್ಯಾಧ್ಯಕ್ಷ ಕೆ.ಶಿವಶಂಕರ್, ಜಿಲ್ಲಾ ನೌಕರರ ಘಟಕದ ಖಜಾಂಚಿ ಕೊಟ್ರೇಶ್ವರ, ಕೆ.ಕೆ.ನಾಗರಾಜ್, ಅಂಗಡಿ ಸ್ವರೂಪ್, ದಾವಣಗೆರೆ ಗ್ರಾಮಾಂತರ ಅಧ್ಯಕ್ಷ ಎಂ.ಎಸ್. ಜಯಣ್ಣ ಬಿಸಲೇರಿ, ಮಂಜುನಾಥ್ ಪುರವಂತರ, ಶ್ರೀಧರ್ ಸಣ್ಣಪ್ಪನವರ, ಎಂ. ಮಹೇಶ್ವರಪ್ಪ, ಕೆ.ಸಿ.ಉಮಾಕಾಂತ್, ಶ್ರೀಧರ್, ಎನ್.ಹೆಚ್.ಲಿಂಗರಾಜ್ ದೇವರಬೆಳಕೆರೆ ಮುಂತಾದ ಸಮಾಜದ ಪ್ರಮುಖರು ಹಾಜರಿದ್ದರು.

# ಮರಣವೇ ಮಹಾನವಮಿಯ ಜಿಜ್ಞಾಸೆ

ಹುಟ್ಟಿದ ಮೇಲೆ ಸಾಯುವುದು ಪ್ರಕೃತಿಯ ನಿಯಮ. ಆದರೆ, ಪ್ರತಿಯೊಬ್ಬರ ಸಾವಿಗೂ ವಿಚಿತ್ರ ಕಾರಣಗಳ ನೆಪಗಳು ಮಾತ್ರ ವಿಪರ್ಯಾಸ. ಆಸ್ತಿಕರ ಒಡನಾಟಗಳು ಸಾವು ಮತ್ತು ಹುಟ್ಟು ಆ ಭಗವಂತನ ಅಂತರ್ಮುಖ ಹಾಗೂ ಬಹಿರ್ಮುಖದ ಪರಮಾವಧಿಗಳೆಂದು ಬಿಂಬಿಸದರೆ ಅದೇ ನಾಸ್ತಿಕರ ಒಟನಾಟಗಳು ಅವರವರ ದೇಹ ಪ್ರಕೃತಿಯ ವಸ್ತು ಸ್ಥಿತಿ. ಅದಕ್ಕೆ ಅವರವರೇ ಕಾರಣರೆಂದು ಪ್ರತಿಪಾದಿಸುತ್ತಾರೆ. ಈ ಮನಸು ಮತ್ತು ಮೆದುಳು ಹಾಗೂ ದೇಹ ಈ ಮೂರರಲ್ಲಿ ಪ್ರಮುಖ ಪಾತ್ರ ಮನಸಿನದ್ದೇ ಆದರೂ ಇವುಗಳನ್ನು ಮೀರಿಸಿ ಮಣ್ಣಾಗಿಸುವ ಶಕ್ತಿ ಮರಣಕ್ಕಿದೆ.





ಮರಣವೆಂದರೆ ಜೀವಿಯ ಅಂತ್ಯವಾಗುವುದು. ಇನ್ನೊಂದು ಅರ್ಥದಲ್ಲಿ ಈ ಜಗತ್ತಿನಿಂದ ಇಲ್ಲವಾಗುವುದು. ಜನನದಂತೆ ಮರಣವೂ ನಿಸರ್ಗ ಪ್ರೇರಿತ. ಮರಣವೆಂದರೆ ದೇಹದಿಂದ ಆತ್ಮ ಸ್ವತಂತ್ರವಾಗುವುದು ಎಂಬ ಭಾವನೆ ಜಗತ್ತಿನ ಎಲ್ಲ ದೇಶಗಳಲ್ಲಿಯೂ ಇದೆ. ಎಲ್ಲಾ ಧರ್ಮಗಳಲ್ಲಿಯೂ ಮರಣ ಸಂಬಂಧ ಕಲ್ಪನೆಗಳಲ್ಲಿ ಸಾದೃಶ್ಯವಿದೆ. ಮನುಷ್ಯ ಸಹಜವಾದ ಭೀತಿ, ನಿರೀಕ್ಷೆ, ಆಶೋತ್ತರಗಳನ್ನು ಮರಣದ ಕಲ್ಪನೆ ಪ್ರತಿಬಿಂಬಿಸುತ್ತದೆ.

ಶರಣರ ಪಾಲಿಗೆ ಮರಣವೇ ಮಹಾನವಮಿ ಎನ್ನುವುದಾದರೆ, ಈ ಎರಡು ವರ್ಷಗಳಲ್ಲಿ ಬರೀ ಮಹಾನವಮಿಯನ್ನೇ ಕಾಣುವುದಾಗಿದೆ. ಅದರಂತೆ ಯಾರೇ ಸತ್ತರೂ ಅವರ ಗುಣಾವಗುಣಗಳ ಸಂಪೂರ್ಣ ಆರೋಗ್ಯಕರ ಚರ್ಚೆಗಳು ನಡೆಯುತ್ತವೆ. ಆ ವ್ಯಕ್ತಿ ಒಳ್ಳೆಯವನಾಗಿದ್ದರೆ, ಸಂಪನ್ನ ಬದುಕನ್ನು ಜೀವಿಸಿದ್ದರೆ, ಆ ವ್ಯಕ್ತಿಯ ಕೊನೆಯ ದಿನವನ್ನು ಎಲ್ಲರೂ ಸೇರಿ ಖುಷಿಯಿಂದ, ಸಂಭ್ರಮದಿಂದ ಬೀಳ್ಕೊಡುವಿಕೆಯನ್ನು ವಚನಕಾರರು 'ಶರಣರ ಗುಣ ಮರಣದಲಿ ನೋಡು' ಹಾಗೂ ಆ ದಿನವನ್ನು ಮಹಾನವಮಿಯನ್ನಾಗಿ ಆಚರಿಸಿ ಎಂದು ಹೇಳಿದ್ದು ಇದೇ ಅರ್ಥದಲ್ಲಿರಬಹುದು. ಅವರ ದೃಷ್ಟಿಯಲ್ಲಿ - 'ಮರಣವೆಂದರೆ ಸರ್ವನಾಶವಲ್ಲ; ಒಂದರಿಂದ ಇನ್ನೊಂದರ ಮಾರ್ಪಾಡು. ಮರಣವು ನವ ಜನ್ಮದ ತಾಯಿ ; ನವಜೀವನದ ಬಸಿರು ; ಮುಂದುವರಿಯುವ ಜೀವನಕ್ಕೆ ಹೊಸ ಏರ್ಪಾಡು; ಮರಣದಿಂದ ಹಳೆಯ ಭೂಮಿಕೆಯ ಸೀಮೆ ದಾಟಿ, ಹೊಸ ಸೀಮೆಯಲ್ಲಿ ಕಾಲಿರಿಸುವ ಬದಲಾವಣೆ'.

ಮನುಷ್ಯ ಎಷ್ಟೆಲ್ಲಾ ಬೆಳೆದರೂ, ಏನೆಲ್ಲಾ ಸಾಧಿಸಿದರೂ, ವೈಜ್ಞಾನಿಕವಾಗಿ, ವೈಚಾರಿಕವಾಗಿ ಪ್ರಕೃತಿಗೇ ಎದುರಾಗಿ ಏನೇನೆಲ್ಲಾ ವಿಕ್ರಮಗಳನ್ನು ತನ್ನದಾಗಿಸಿಕೊಂಡರೂ, ಇನ್ನೂ ಭೇದಿಸಲಾಗದ ಒಂದು ವಿಸ್ಮಯವೆಂದರೆ 'ಸಾವು'. ಸಾವನ್ನು ಭೇದಿಸೋದಿರಲಿ ಅದಕ್ಕೊಂದು ಪರಿಪೂರ್ಣವಾದ ವ್ಯಾಖ್ಯಾನವನ್ನೂ ನಮ್ಮಿಂದ ಕೊಡಲಾಗಿಲ್ಲ ಈವರೆಗೂ. ಸಾವು ಹೇಗೆ ಅಂದರೆ, ಯಾರೋ ಬಂದು ನಿಮ್ಮ ಮನೆಗೆ ಬೀಗ ಹಾಕಿ, ಬೀಗದ ಕೈಯನ್ನು ತೆಗೆದುಕೊಂಡು ಹೋದ ಹಾಗೆ. ಆದರೆ, ಸಾಧನೆಯ ಉತ್ತುಂಗದಲ್ಲಿರುವಾಗ ಸಮಾಜಮುಖಿಯಾಗಿ ಬದುಕುತ್ತಿರುವಾಗಲೇ ನಡುವಯಸ್ಸಿನಲ್ಲೇ ಮರಣ ಬಂದಪ್ಪಳಿಸಿದರೆ ಮಹಾನವಮಿಯನ್ನು ಆಚರಿಸುವುದೆಂತು ? ಇವನಿನ್ನೂ ಬದುಕಬೇಕಿತ್ತು ಎನ್ನುವಾಗಲೇ ಮಣ್ಣಾದರೆ ಆಸ್ತಿಕರ ಮಾತನ್ನೊಪ್ಪಿ ಆ ವಿಧಿಗೆ ಧಿಕ್ಕಾರ ಕೂಗಬೇಕಾದದ್ದು ಸತ್ಯ. 'ತೃಣಮಪಿನ ಚಲತಿ' ಎಂದರೆ ದೇವನ ಅನುಜ್ಞೆ ಇಲ್ಲದೆ ಏನೊಂದು ಚಲಿಸುವುದಿಲ್ಲ. ಅಂದರೆ ದೇವರಿಗೂ, ಸಾವಿಗೂ ಏನೋ ನಂಟಿರಬೇಕೆಂಬ ಅನುಮಾನ ಎದುರಾಗುತ್ತದೆ.ಪ್ರತಿಯೊಬ್ಬರ ಸಾವಿಗೂ ಪ್ರತ್ಯೇಕ ಕಾರಣಗಳು ಪ್ರತಿಫಲನವಾಗುತ್ತವಲ್ಲ ಅದಂತೂ ವಿಚಿತ್ರವೇ ಸರಿ.

ಅದೇ ರೀತಿ ಆಶ್ಚರ್ಯಕರ ರೀತಿಯಲ್ಲಿ ಹಠಾತ್ತಾಗಿ ಕಾಣಿಸಿಕೊಂಡ ಹೃದಯಾಘಾತದಿಂದಾಗಿ 29 ಅಕ್ಟೋಬರ್ 2021 ರಂದು ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯಲ್ಲಿ ಮರಣ ಹೊಂದಿದ ಪುನೀತ್ ರಾಜ್‌ಕುಮಾರ್ ಅವರನ್ನು ಕನ್ನಡ ನಾಡು ಒಬ್ಬ ನಟನನ್ನಾಗಿ ನೋಡದೆ ಮನೆ ಮಗನಂತೆ ಕಂಡ ಅಬಾಲವೃದ್ಧರಾದಿಯಾಗಿ ಎಲ್ಲರೂ ಕಣ್ಣೀರಾಗಿದ್ದಾರೆ.

ನಟ ಪುನೀತ್ ರಾಜ್‌ಕುಮಾರ್ ನಿಧನದಿಂದ ಇಡೀ ಕರುನಾಡಿನಲ್ಲೇ ಸೂತಕದ ಛಾಯೆ ಆವರಿಸಿದೆ. ಈ ಕ್ಷಣಕ್ಕೂ ಅಪ್ಪು ನಿಧನವನ್ನು ನಂಬೋಕೆ ಸಾಧ್ಯವಾಗದ ಅಸಂಖ್ಯಾತ ಮಂದಿ ಎಲ್ಲೆಡೆ ಇದ್ದಾರೆ. ಅವರ ಅಭಿಮಾನಿಗಳಿಗಂತೂ ಕನಸಿನಲ್ಲೂ ಅರಗಿಸಿಕೊಳ್ಳಲಾಗದ ಅತ್ಯಂತ ದುಃಖದ ವಿಚಾರ ಮತ್ತೊಂದಿರಲಾರದು. ಆಶ್ರಮ, ಅನಾಥ ಮಕ್ಕಳಿಗೆ ಶಿಕ್ಷಣ, ಗೋಶಾಲೆ ಇನ್ನಿತರೆ ಕಾರ್ಯಗಳಿಂದ ಸಮಾಜಮುಖಿಯಾಗಿ ಬದುಕುತ್ತಿದ್ದ ಮಾದರಿ ನಟನ ಮರಣ ಮಹಾನವಮಿಯಾಗುತ್ತಿಲ್ಲವೆಂಬುದೇ ಬೇಸರದ ಸಂಗತಿ. ಆ ದುಃಖವನ್ನು ಭರಿಸಲಾಗದೆ ಅವರ ಅಭಿಮಾನಿಗಳು ಆತ್ಮಹತ್ಯೆಗೆ ಶರಣಾಗಿದ್ದು ಮಾತ್ರ ದುರಂತ. ನಿಮ್ಮ ಬದುಕಿನ ಸಂಸ್ಕೃತಿ ಇತರೆ ನಟರಿಗೂ ಮಾದರಿಯಾಗಲಿ.

ಎನಿ ವೇ ಹೋಗಿ ಬನ್ನಿ ಅಪ್ಪು, ನಿಮ್ಮ ಆತ್ಮಕ್ಕೆ ಆ ಭಗವಂತ ಶಾಂತಿ ನೀಡಲಿ. ಆಹಾ ಅಂದ ಹಾಗೆ ಕನ್ನಡ ರಾಜ್ಯೋತ್ಸವದ ನೆನಪಿನೊಂದಿಗೆ ಮತ್ತೊಮ್ಮೆ ಕರುನಾಡಲ್ಲಿ ಹುಟ್ಟಿ ಬನ್ನಿ.

**- ಪಾಪುಗುರು, ದಾವಣಗೆರೆ**

## ಪುನೀತ್ ನಿಧನಕ್ಕೆ ಸಂತಾಪ

ಹರಪನಹಳ್ಳಿ, ಅ.30- ಕರ್ನಾಟಕದ ಮೇರುನಟ ಡಾ. ರಾಜ್‌ಕುಮಾರ್ ಪುತ್ರ ನಟ ಪುನೀತ್ ನಿಧನಕ್ಕೆ ತೆಗ್ಗಿನ ಮಠದ ಶ್ರೀ ವರಸದ್ಯೋಜಾತ ಸ್ವಾಮಿಗಳು, ಶಾಸಕರಾದ ಜಿ. ಕರುಣಾಕರ ರೆಡ್ಡಿ, ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ್ ತೀವ್ರ ಸಂತಾಪ ವ್ಯಕ್ತ ಪಡಿಸಿದ್ದಾರೆ.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚಂಗೆಪ್ಪ, ಸಾಧು ವೀರಶೈವ ಸಮಾಜದ ತಾಲ್ಲೂಕು ಅಧ್ಯಕ್ಷ ಬಂದೋಳ್ ಮಂಜುನಾಥ್, ವೀರಶೈವ ಪಂಚಮ ಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಪಿ. ಬೆಟ್ಟನಗೌಡ್ರು, ಭೋವಿ ಸಮಾಜದ ತಾಲ್ಲೂಕು ಅಧ್ಯಕ್ಷ ಎಂ.ಬಿ. ಅಂಜಿನಪ್ಪ, ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರೇಗೌಡ, ಮಾಜಿ ಅಧ್ಯಕ್ಷ ಮತ್ತಿಹಳ್ಳಿ ಅಜ್ಜಣ್ಣ, ಯು.ಬೇವಿನಹಳ್ಳಿಯ ಯುವ ಮುಖಂಡ ಎಂ.ಬಿ. ಯಶವಂತಗೌಡ, ತಾಲ್ಲೂಕು ಈಡಿಗ ಸಮಾಜದ ಗೌರವ ಅಧ್ಯಕ್ಷ ಈ. ದೇವದಾಸ್, ಖಜಾಂಚಿ ಹೆಚ್.ವೈ. ನಾರಾಯಣ ಸ್ವಾಮಿ, ಕಾರ್ಯದರ್ಶಿ ಈ. ವೆಂಕಟೇಶ್ ಕಂಚಿಕೇರಿ, ಸಹಕಾರ್ಯದರ್ಶಿ ವೆಂಕಟ ರಾಜು, ಮುಖಂಡರಾದ ಈ. ದುರ್ಗಪ್ಪ, ಪದ್ಮನಾಭ್, ಬೇವಿನಹಳ್ಳಿ ಚನ್ನಬಸಪ್ಪ, ರೋಹಿತ್ ಕುಮಾರ್, ವಿಜಯ ಕುಮಾರ್, ಮಲ್ಲಿಕಾರ್ಜುನ, ನಾಗಪ್ಪ, ಸೋಮಣ್ಣ, ರಾಘು, ಶರತ್, ಚೇತನ್, ಚಂದ್ರಶೇಖರ್, ಚಿದಾನಂದಪ್ಪ, ಭೀಮೇಶ್, ಕಾರ್ತಿಕ್, ಆನಂದ, ಶೈಲಜ, ಪೂಜಾ ಇನ್ನಿತರರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

## ಪ್ಲಾಸ್ಟಿಕ್ ಧ್ವಜ ಮಾರಾಟ, ಬಳಕೆ ನಿಷೇಧ

ದಾವಣಗೆರೆ, ಅ.30- ನಾಳೆ ಆಚರಿಸಲಿರುವ ಕನ್ನಡ ರಾಜ್ಯೋತ್ಸವವನ್ನು ಪರಿಸರ ಸ್ನೇಹಿಯಾಗಿ ಆಚರಿಸಬೇಕಿದ್ದು, ಪ್ಲಾಸ್ಟಿಕ್ ಧ್ವಜ ಬಳಕೆ ಮಾಡದಂತೆ ಸಾರ್ವಜನಿಕರಲ್ಲಿ ಮನವಿ ಮಾಡಿರುವ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪರಿಸರ ಅಧಿಕಾರಿ ಎಂ.ಎಸ್.ಮಹೇಶ್ವರಪ್ಪ, ಪ್ಲಾಸ್ಟಿಕ್ ಧ್ವಜ ಮಾರಾಟ ಮಾಡುವಂತಹ ಅಂಗಡಿ ಮಾಲೀಕರುಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

**SHREE VEERABHADRESHWARA CONSULTANCY SERVICES**
*CIVIL ENGINEERS AND DEVELOPERS*
# 80/18, Opp. P.J. Lodge, A.V.K. College Road, P.J. Extension, DAVANGERE-577 002.
Cell: 9916173399, 9343277422
WE OFFER THE FOLLOWING SERVICE :
✦ CONSTRUCTION CONSULTANTS
✦ ARCHITECTURAL VASTU PLAN
✦ ESTIMATION & VALUATION
✦ 3D VIEW & INTERIOR DESIGN .
✦ ASSISTANCE FOR BUILDING LICENSE PLAN
✦ ASSISTANCE FOR LAY OUT DESIGN & LAND DEVELOPMENT
✦ A4 TO AO PLOTTER PRINTS & BLUE PRINTS

**ದೀಪಾವಳಿ ಕೊಡುಗೆ**
*ಈ ದೀಪಾವಳಿ ನಿಮ್ಮ ಕುಟುಂಬದ ಸದಸ್ಯರನ್ನು ಕೇಳುವಂತೆ ಬದಲಾಯಿಸಲಿ. ಪ್ರೀತಿಯಿಂದ ಉತ್ತಮ ಶ್ರವಣ ಯಂತ್ರಗಳನ್ನು ಉಡುಗೊರೆಯಾಗಿ ನೀಡಿ.*
ಅತ್ಯಂತ ವಿಶ್ವಾಸಾರ್ಹ ಅಂತರರಾಷ್ಟ್ರೀಯ ಬ್ರ್ಯಾಂಡ್‌ಗಳಾದ : ಒಟ್ಟಿಕಾನ್, ಯೂನಿಸೌಂಡ್, ಸಿಗ್ನಿಯಾ, ಆಲ್ಫ್, ರೆಕ್ಸಟಾನ್ ಮತ್ತು ಇಂಟರ್‌ಟನ್ ದೊರೆಯುತ್ತವೆ.
ಪ್ರೋಗ್ರಾಮಬಲ್,ರೀಚಾರ್ಜಬಲ್, ಡಿಜಿಟಲ್ (ಇನ್ ದಿ ಇಯರ್ ಐಟಿಸಿ, ಬಿಹೈಂಡ್ ದಿ ಇಯರ್ ಬಿಟಿಇ) ಶ್ರವಣ ಯಂತ್ರಗಳು
ಎಲ್ಲಾ ಶ್ರವಣ ಉಪಕರಣಗಳ ಮೇಲೆ 2 ವರ್ಷದ ಗ್ಯಾರಂಟಿಯೊಂದಿಗೆ 30% ದೀಪಾವಳಿ ರಿಯಾಯಿತಿ + ಉಚಿತ ಶ್ರವಣ ಪರೀಕ್ಷೆ
*ಈ ಕೊಡುಗೆ ಸೀಮಿತ ಅವಧಿಯವರೆಗೆ*
ಕ್ರೆಸ್ಟ್ ವಾಕ್ ಮತ್ತು ಶ್ರವಣ ಕೇಂದ್ರ
3ನೇ ಮೇನ್, ಪಿ.ಜೆ. ಬಡಾವಣೆ
ಸುಶ್ರುತ ಕಣ್ಣಿನ ಆಸ್ಪತ್ರೆ ಎದುರು,(ಮಹಡಿ ಮೇಲೆ)
ದಾವಣಗೆರೆ. ಮೊ: 97437 80492

**ಧನ್ವಂತರಿ ಜಯಂತಿ ಮತ್ತು ರಾಷ್ಟ್ರೀಯ ಆಯುರ್ವೇದ ದಿನದ ಪ್ರಯುಕ್ತ**
**ಸ್ವಯಂ ಪ್ರೇರಿತ ರಕ್ತದಾನ ಶಿಬಿರ**
ದಿನಾಂಕ 1.11.2021, ಸಮಯ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ
**ಸ್ತ್ರೀ ಸಂಬಂಧಿತ ಸಮಸ್ಯೆಗಳಿಗೆ ಉಚಿತ ಚಿಕಿತ್ಸೆ ಮತ್ತು ತಪಾಸಣೆ ಶಿಬಿರ**
ದಿನಾಂಕ 02.11.2021, ಸಮಯ ಬೆ.10 ಗಂಟೆಯಿಂದ ಮಧ್ಯಾಹ್ನ 2 ಗಂಟೆ ವರೆಗೆ
**ಲೋಕ ಕಲ್ಯಾಣಾರ್ಥವಾಗಿ ಧನ್ವಂತರಿ ಹೋಮ**
ದಿನಾಂಕ 3.11.2021, ಸಮಯ ಬೆಳಗ್ಗೆ 9.30 ಗಂಟೆಗೆ ಹೋಮದ ಪ್ರಸಾದದ ರೂಪದಲ್ಲಿ ವಿಶೇಷವಾದ ಧನ್ವಂತರಿ ಮಾತ್ರೆಗಳನ್ನು ಉಚಿತವಾಗಿ ವಿತರಿಸಲಾಗುವುದು. (ಮೊದಲ 100 ಜನರಿಗೆ ಮಾತ್ರ) (ಕೆಮ್ಮು, ದಮ್ಮು, ಹೃದಯ ಸಂಬಂಧಿ ಕಾಯಿಲೆ, ಜಠರ ಸಮಸ್ಯೆಗಳಿಗೆ ಬಹು ಉಪಯುಕ್ತ ಔಷಧಿ)
**ಅನ್ವಯ ಆಯುರ್ವೇದ ಆಸ್ಪತ್ರೆ**
# 1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ
08192 252228 / 86186 42929

# ದಿನಗೂಲಿ ನೌಕರರಿಗೆ ಬಾಕಿ ವೇತನ



## ಶಾಸಕ ರಾಮಪ್ಪ ಭರವಸೆ

ಮಲೇಬೆನ್ನೂರು, ಅ.30- ಪಟ್ಟಣದ ಭದ್ರಾ ನಾಲಾ ನಂ.3 ವಿಭಾಗದ ವ್ಯಾಪ್ತಿಯಲ್ಲಿ ದಿನಗೂಲಿ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ 158 ಜನರಿಗೆ ದೀಪಾವಳಿ ಹಬ್ಬದ ಒಳಗಾಗಿ ಬಾಕಿ ವೇತನ ಕೊಡಿಸುವುದಾಗಿ ಶಾಸಕ ಎಸ್.ರಾಮಪ್ಪ ಭರವಸೆ ನೀಡಿದರು.

ಇಲ್ಲಿನ ನೀರಾವರಿ ಕಚೇರಿಯಲ್ಲಿ 4 ತಿಂಗಳ ವೇತನ ನೀಡುವಂತೆ ಒತ್ತಾಯಿಸಿ, ದಿನಗೂಲಿ ನೌಕರರು ಪ್ರತಿಭಟನೆ ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆ ಕರೆದಿದ್ದರು.

ಈ ವಿಷಯ ತಿಳಿದ ಶಾಸಕ ರಾಮಪ್ಪ ಅವರು ಶನಿವಾರ ಸಂಜೆ ದಿನಗೂಲಿ ನೌಕರರನ್ನು ಭೇಟಿ ಮಾಡಿ, ಸಮಸ್ಯೆ ಆಲಿಸಿ, ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ್ ಗುಂಗೆ ಅವರೊಂದಿಗೆ ಮೊಬೈಲ್ ಮೂಲಕ ಮಾತನಾಡಿ, ಸಮಸ್ಯೆ ತಿಳಿಸಿ ವೇತನ ನೀಡುವಂತೆ ಒತ್ತಾಯಿಸಿದರು.

ದಿನಗೂಲಿ ನೌಕರರ 3 ತಿಂಗಳ ವೇತನವನ್ನು ಈ ಹಿಂದೆ ಟೆಂಡರ್ ಆಗಿದ್ದ ಸಿಂಧನೂರಿನ ಶರಣು ಬಸವರಾಜ್ ಎಂಬುವವರು ನೀಡಬೇಕೆಂದು ಭದ್ರಾ ನಾಲಾ ನಂ.3 ವಿಭಾಗದ ಇಇ ಚಿದಂಬರ್ ಲಾಲ್ ತಿಳಿಸಿದಾಗ ಶಾಸಕರು ಗುತ್ತಿಗೆದಾರರೊಂದಿಗೆ ಮಾತನಾಡಿ, ವಿಷಯ ಕುರಿತು ಚರ್ಚಿಸಿದರು.

ನ.2 ರ ಮಂಗಳವಾರ ಮಲೇಬೆನ್ನೂರಿಗೆ ಬಂದು ಸಮಸ್ಯೆ ಬಗೆಹರಿಸುವುದಾಗಿ ಗುತ್ತಿಗೆದಾರರ ಶರಣು ಬಸವರಾಜ ಅವರು ಶಾಸಕರಿಗೆ ತಿಳಿಸಿದರು.

ಆಗ ಶಾಸಕ ರಾಮಪ್ಪ ಅವರು ದಿನಗೂಲಿ ನೌಕರರನ್ನು ಸಮಾಧಾನ ಪಡಿಸಿ, ದೀಪಾವಳಿ ಹಬ್ಬದ ಒಳಗಾಗಿ ಬಾಕಿ ವೇತನ ಕೊಡಿಸುವುದಾಗಿ ಹೇಳಿ, ಪ್ರತಿಭಟನೆ ಬೇಡ, ಕಾಲುವೆಗಳ ಮೇಲೆ ಸಂಚರಿಸಿ, ನೀರಿನ ನಿರ್ವಹಣೆ ಮಾಡಿ ಎಂದರು.

ಮಲೇಬೆನ್ನೂರು ಎಇಇ ಸಂತೋಷ್, ಬಸವಾಪಟ್ಟಣ ಎಇಇ ಧನಂಜಯ, ದಿನಗೂಲಿ ನೌಕರರ ಸಂಘದ ಗೌರವಾಧ್ಯಕ್ಷರಾದ ಕುಬೇರಪ್ಪ, ಅಣ್ಣಪ್ಪ, ಅಧ್ಯಕ್ಷ ನಾರಪ್ಪ, ಉಪಾಧ್ಯಕ್ಷ ರೇವಣಸಿದ್ದಪ್ಪ, ಕಾರ್ಯದರ್ಶಿ ಸಿದ್ದನಗೌಡ, ಜಯನಾಯ್ಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ಜಿಗಳಿಯ ಬಿಳಸನೂರು ಚಂದ್ರಪ್ಪ, ಕೆ.ಪಿ.ಗಂಗಾಧರ್, ಪಿಎಸಿಎಸ್ ಅಧ್ಯಕ್ಷ ಪಿ.ಆರ್.ಕುಮಾರ್, ಎ.ಆರೀಫ್ ಅಲಿ, ಕೆ.ಜಿ. ಲೋಕೇಶ್ ದಾದಾವಲಿ, ಭೋವಿಕುಮಾರ್, ಪಿ.ಹೆಚ್. ಶಿವಕುಮಾರ್, ಫಕ್ರುದ್ದೀನ್, ಜಾಫರ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಕೊಕ್ಕನೂರಿಗೆ ಇಂದು ಸತೀಶ್ ಜಾರಕಿಹೊಳಿ

ಕೆಪಿಸಿಸಿ ಕಾರ್ಯಾಧ್ಯಕ್ಷರೂ, ಮಾಜಿ ಸಚಿವರೂ ಆದ ಶಾಸಕ ಸತೀಶ್ ಜಾರಕಿಹೊಳಿ ಅವರು ಇಂದು ಬೆಳಿಗ್ಗೆ 10.30ಕ್ಕೆ ಕೊಕ್ಕನೂರು ಗ್ರಾಮಕ್ಕೆ ಹೆಲಿಕಾಪ್ಟರ್ ಮೂಲಕ ಆಗಮಿಸಿ, ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅಲ್ಲಿಂದ ಜಗಳೂರಿಗೆ ತೆರಳಲಿದ್ದಾರೆ ಎಂದು ಗ್ರಾಮದ ಡಿ.ಸೋಮಶೇಖರ್ ತಿಳಿಸಿದ್ದಾರೆ.

# 77 ಸಂವತ್ಸರಗಳನ್ನು ಕಳೆದು 78ಕ್ಕೆ ಪಾದಾರ್ಪಣೆ

77 ಸಂವತ್ಸರಗಳನ್ನು ಪೂರ್ಣಗೊಳಿಸಿ, 78 ಕ್ಕೆ ಪಾದಾರ್ಪಣೆ ಮಾಡುತ್ತಿರುವ ವಿಧಾನಸಭೆಯ ಮಾಜಿ ಅಧ್ಯಕ್ಷ ಕೋಳಿವಾಡರವರ ಜನ್ಮದಿನವನ್ನು ನವೆಂಬರ್ 1 ರಂದು ಅವರ ಅಭಿಮಾನಿಗಳು ಕಾಂಗ್ರೆಸ್ ಪಕ್ಷದ ಕಛೇರಿಯ ನೂತನ ಕಟ್ಟಡ, ವಿನಾಯಕ ನಗರದ ಕೋಳಿವಾಡ ಸಭಾಭವನದಲ್ಲಿ ಆಚರಿಸಲಿದ್ದಾರೆ.

ಬಾನೆತ್ತರದಲ್ಲಿ ಸ್ವಚ್ಛಂದವಾಗಿ ಹಾರುತ್ತಿದ್ದ ಪಾರಿವಾಳಗಳನ್ನು ಸಾಕಿ, ಸಲುಹುತ್ತಾ ಅವುಗಳ ಒಡನಾಡಿಯಾಗಿದ್ದ ಪುಟ್ಟ ಗ್ರಾಮ ಗುಡಗೂರಿನ ಪುಟ್ಟ ಹುಡುಗ ಕೃಷ್ಣಪ್ಪನೇ, ಸಂವಿಧಾನದ ಉನ್ನತ ಸ್ಥಾನ ಕರ್ನಾಟಕ ವಿಧಾನಸಭೆ ಅಧ್ಯಕ್ಷ ಪೀಠವನ್ನಲಂಕರಿಸಿದ ಕೆ.ಬಿ. ಕೋಳಿವಾಡರವರು.

ಹೇಮರಡ್ಡಿ ಮಲ್ಲಮ್ಮನ ಕೃಪಾಕಟಾಕ್ಷದ ಶ್ರೀಮಂತ ರಡ್ಡಿ ಸಮಾಜದ ಅವಿಭಕ್ತ ಕುಟುಂಬದ ವೆಂಕಪ್ಪನವರ ಮಗನಾಗಿ ದಿ.1.11.1944 ರಂದು ಬಾಯಲ್ಲಿ ಬಂಗಾರದ ಚಮಚವನ್ನೇ ಇಟ್ಟುಕೊಂಡು ಹುಟ್ಟಿದ ಕೃಷ್ಣಪ್ಪ ಕೋಳಿವಾಡರು, ಅದೇ ಕುಟುಂಬದ ಇನ್ನೊಬ್ಬ ಸಿರಿವಂತ, ನೂರಾರು ಎಕರೆ ಜಮೀನಿನ ಒಡೆಯ ಭೀಮಪ್ಪನವರಿಗೆ ದತ್ತು ಪುತ್ರರಾಗುತ್ತಾರೆ.

ಇದ್ದೊಬ್ಬ ಮಗ ಮನೆಯಲ್ಲಿಯೇ ಇದ್ದು ಇರುವ ಸಿರಿತನವನ್ನು ಉಳಿಸಿ, ಬೆಳೆಸಿಕೊಳ್ಳುವಷ್ಟು ಅಕ್ಷರ ಜ್ಞಾನ ಸಾಕು ಎನ್ನುವ ಹಿರಿಯರ ಆಸೆಯನ್ನು ಬದಿಗಿರಿಸಿ ಸೋದರ ಮಾವ ಒಡೆಯರಹಳ್ಳಿ ವಕೀಲರ ಪ್ರೋತ್ಸಾಹದೊಂದಿಗೆ ಕಾಲೇಜು ಮೆಟ್ಟಿಲೇರಿ, ಮುಂದೆ ವಿಶ್ವವಿದ್ಯಾಲಯದಲ್ಲಿ ಪದಕದ ಜೊತೆ ಪದವಿ ಪಡೆಯುತ್ತಾರೆ.


ಕಾನೂನು ಪದವಿ ಪಡೆದರೂ ಸಹ ವಕೀಲಿಕಿ ವೃತ್ತಿ ಮಾಡಲು ಒಪ್ಪದ ಹಿರಿಯರ ಮಾತುಗಳನ್ನು ನಿರಾಕರಿಸಿ, ರಾಣೇಬೆನ್ನೂರಿನ ನ್ಯಾಯಾಲಯದಲ್ಲಿ ಖ್ಯಾತನಾಮರಾಗಿದ್ದ ನೇಕಾರ ಸಮಾಜದ ಎಂ. ಎಂ. ಬೆನ್ನೂರ ವಕೀಲರ ಬಳಿ ಕಿರಿಯ ವಕೀಲರಾಗಿ ಸೇರಿ ಅವರ ಮಾರ್ಗದರ್ಶನದಲ್ಲಿ ಸಾಕಷ್ಟು ಪರಿಣಿತಿ ಪಡೆಯುತ್ತಾರೆ.

ತಂದೆ ವೆಂಕಟಪ್ಪ ಮಾಡುತ್ತಿದ್ದ ನ್ಯಾಯ ಪಂಚಾಯತಿ, ಕೆ.ಹೆಚ್. ಪಟೇಲರ ಪ್ರೋತ್ಸಾಹದೊಂದಿಗೆ ಎಪಿಎಂಸಿ ನಿರ್ದೇಶಕರಾಗಿ ರಾಜಕೀಯ ಪ್ರವೇಶಿಸಿ, 1972 ರಲ್ಲಿ ನಡೆದ ತಮ್ಮ ಮೊದಲ ಅಸೆಂಬ್ಲಿ ಚುನಾವಣೆಯಲ್ಲಿಯೇ ಜಯ ಗಳಿಸಿ ವಿಧಾನಸಭೆ ಪ್ರವೇಶಿಸಿದ ಕೋಳಿವಾಡರು ಅಂದಿನ ಮನೆಯ ಅತ್ಯಂತ ಕಿರಿಯ ಸದಸ್ಯರಾಗುತ್ತಾರೆ.

ಕಾಂಗ್ರೆಸ್ ಪಕ್ಷದ ನಿಷ್ಠಾವಂತರಾಗಿ ಕೋಳಿವಾಡರು 11 ಚುನಾವಣೆಗಳನ್ನು ಎದುರಿಸಿ ಸೋಲು-ಗೆಲುವುಗಳನ್ನು ಸಮನಾಗಿ ಸ್ವೀಕರಿಸಿದರು. ಕ್ಷೇತ್ರದಲ್ಲಿ ತಮ್ಮ ಸಮಾಜದ ಅತ್ಯಂತ ಕಡಿಮೆ ಮತದಾರರನ್ನು ಪ್ರತಿನಿಧಿಸಿದರು ಸಹ, ಅಂದಿನ ಜಾತಿ ಹಾಗೂ ಹಣ ರಹಿತ ಆರೋಗ್ಯಕರ ವಾತಾವರಣವನ್ನು ಸದುಪಯೋಗ ಪಡಿಸಿಕೊಂಡು, ಪಕ್ಷದ ಸಂಘಟನೆ ಜೊತೆಗೆ ತಮ್ಮದೇ ಆದ ಬೆಂಗಾವಲು ಪಡೆಯನ್ನು ಬಲವಾಗಿಸಿಕೊಂಡ ನುರಿತ, ಚಾಣಾಕ್ಷ ರಾಜಕಾರಣಿ ಎನ್ನಬಹುದು. ಬಣ್ಣದ ಗೀಳು... ತಂದೆ ವೆಂಕಪ್ಪನವರಿಂದ ರಕ್ತಗತವಾಗಿ ಬಂದ ನಾಟಕದ ಗೀಳು ಇವರಿಗೂ ಬಣ್ಣ ಹಚ್ಚಿಸಿತ್ತು. ರಕ್ತರಾತ್ರಿ, ಕುರುಕ್ಷೇತ್ರ ಮತ್ತು ಸಂಸಾರ ನಾಟಕಗಳಲ್ಲಿ ಅಭಿನಯಿಸಿದರು.


- ಮನೋಹರ ಮಲ್ಲಾಡದ


## ಜನ್ಮದಿನದ ಶುಭಾಶಯಗಳು




77 ಸಂವತ್ಸರಗಳನ್ನು ಕಳೆದು
78 ಕ್ಕೆ ಪಾದಾರ್ಪಣೆ
ಮಾಡುತ್ತಿರುವ ನಮ್ಮ ಆತ್ಮೀಯ
ಮುಖಂಡರು, ನಮ್ಮ ಹಿತೈಷಿಗಳೂ
ಆಗಿರುವ ಮಾಜಿ ಸಚಿವರೂ,
ವಿಧಾನಸಭೆ ಮಾಜಿ ಅಧ್ಯಕ್ಷರು ಆದ

**ಸನ್ಮಾನ್ಯ ಶ್ರೀ ಕೆ.ಬಿ. ಕೋಳಿವಾಡ**
ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳು...




**ಮಂಜನಗೌಡ ಹೆಚ್. ಪಾಟೀಲ ಹಿರೇಮಾಗನೂರು**
ಅಧ್ಯಕ್ಷರು, ತಾಲ್ಲೂಕು ಕಾಂಗ್ರೆಸ್ ಪಕ್ಷ (ಗ್ರಾಮೀಣ)
ರಾಣೇಬೆನ್ನೂರು ತಾಲ್ಲೂಕು

## ಜನ್ಮದಿನದ ಶುಭಾಶಯಗಳು



77 ಸಂವತ್ಸರಗಳನ್ನು ಕಳೆದು
78 ಕ್ಕೆ ಪಾದಾರ್ಪಣೆ
ಮಾಡುತ್ತಿರುವ ನಮ್ಮ ಆತ್ಮೀಯ
ಮುಖಂಡರು, ನಮ್ಮ ಹಿತೈಷಿಗಳೂ
ಆಗಿರುವ ಮಾಜಿ ಸಚಿವರು,
ವಿಧಾನಸಭೆ ಮಾಜಿ ಅಧ್ಯಕ್ಷರೂ ಆದ

**ಸನ್ಮಾನ್ಯ ಶ್ರೀ ಕೆ.ಬಿ. ಕೋಳಿವಾಡ**
ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳು...




**ರವೀಂದ್ರಗೌಡ ಎಫ್. ಪಾಟೀಲ ಮುಷ್ಟೂರು**
ಮಾಜಿ ಅಧ್ಯಕ್ಷರು ತಾಲ್ಲೂಕು ಪಂಚಾಯ್ತಿ
ರಾಣೇಬೆನ್ನೂರು.


## ಇಂದು 'ಸರಸ್ವತಿ ಪುರಸ್ಕಾರ' ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನ, ಸಾಲಿಗ್ರಾಮ-ದಾವಣಗೆರೆ ಹಾಗೂ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10.35 ಕ್ಕೆ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ 'ಸರಸ್ವತಿ ಪುರಸ್ಕಾರ' ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.

ವಿಶ್ರಾಂತ ನ್ಯಾಯಾಧೀಶರಾದ ಅರಳಿ ನಾಗರಾಜ್ ಅಧ್ಯಕ್ಷತೆ ವಹಿಸುವರು. ಹಿರಿಯ ಯಕ್ಷಗಾನ ಸಾಹಿತಿ ಜಯಲಕ್ಷ್ಮಿ ಕಾರಂತ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಯಕ್ಷರಂಗ ಯಕ್ಷಗಾನ ಸಂಸ್ಥೆ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ, ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ತಾಲ್ಲೂಕು ಅಧ್ಯಕ್ಷ ಬಿ. ವಾಮದೇವಪ್ಪ, ಶ್ರೀ ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್. ಜಯಂತ್ ಭಾಗವಹಿಸಲಿದ್ದಾರೆ.

## ಜಿಲ್ಲಾ ಕಾಂಗ್ರೆಸ್‌ನಿಂದ ಇಂದು ವಲ್ಲಭಭಾಯಿ ಪಟೇಲ್ ಜನ್ಮ ದಿನಾಚರಣೆ, ದಿ|| ಇಂದಿರಾಗಾಂಧಿ ಪುಣ್ಯತಿಥಿ





ಜಿಲ್ಲಾ ಕಾಂಗ್ರೆಸ್ ಪಕ್ಷದ ವತಿಯಿಂದ ಇಂದು ಮಾಜಿ ಉಪ ಪ್ರಧಾನಿ, ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಜನ್ಮ ದಿನಾಚರಣೆ ಹಾಗೂ ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಯವರ ಪುಣ್ಯತಿಥಿ ಆಚರಿಸಲಾಗುವುದು.

ಬೆಳಿಗ್ಗೆ 11-30 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪನವರ ಅಧ್ಯಕ್ಷತೆಯಲ್ಲಿ, ನಗರದ ವನಿತಾ ಸಮಾಜದ ಹಿರಿಯ ವನಿತೆಯರ ಆನಂದಧಾಮದಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಎಲ್ಲಾ ಜನಪ್ರತಿನಿಧಿಗಳು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್, ಎನ್‌ಎಸ್‌ಯುಐ, ಸೇವಾದಳ, ಪರಿಶಿಷ್ಟ ಜಾತಿ ಮತ್ತು ಪಂಗಡ ವಿಭಾಗ, ಓಬಿಸಿ, ಅಲ್ಪಸಂಖ್ಯಾತರ ವಿಭಾಗ, ವೈದ್ಯಕೀಯ, ವಕೀಲರ ಘಟಕ, ಕಿಸಾನ್ ಘಟಕ, ಅಸಂಘಟಿತ ಕಾರ್ಮಿಕರ ಘಟಕ, ವಿಕಲಚೇತರ ಘಟಕದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಹಾಲಿ ಮತ್ತು ಮಾಜಿ ಸದಸ್ಯರುಗಳು, ಎಪಿಎಂಸಿ ಅಧ್ಯಕ್ಷರು ಮತ್ತು ಸದಸ್ಯರುಗಳು, ಮಹಾನಗರ ಪಾಲಿಕೆಯ ಸದಸ್ಯರುಗಳು, ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಭಾಗವಹಿಸಬೇಕೆಂದು ಎಂದು ಅವರು ಕೋರಿದ್ದಾರೆ.

## ಹರಿಹರ : ಇಂದು ಗುರುವಂದನಾ ಕಾರ್ಯಕ್ರಮ



ಹರಿಹರ ಎಸ್.ಜೆ.ವಿ.ಪಿ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿರುವ ಚಿಂತಕರು ಹಾಗೂ ನೊಂದ ಜನರ ಧ್ವನಿಯಾದ ಪ್ರೊ. ಎ.ಬಿ. ರಾಮಚಂದ್ರಪ್ಪ ಅವರಿಗೆ ಅವರ ಶಿಷ್ಯ ವರ್ಗ ಹಾಗೂ ಅಭಿಮಾನಿಗಳು ಇಂದು ಬೆಳಿಗ್ಗೆ 10.30ಕ್ಕೆ ನಗರದ ಗುರುಭವನದಲ್ಲಿ ಗುರುವಂದನಾ ಕಾರ್ಯಕ್ರಮ ವನ್ನು ಹಮ್ಮಿಕೊಂಡಿದ್ದಾರೆ. ಉದ್ಘಾಟನೆ : ಡಾ.ಕುಮಾರ ಚಲ್ಯ, ಅಧ್ಯಕ್ಷತೆ : ಪ್ರೊ. ಎಸ್.ವಿ.ಪಟ್ಟಣಶೆಟ್ಟಿ, ಮುಖ್ಯಅತಿಥಿಗಳು : ಪ್ರೊ. ಸಿ.ವಿ.ಪಾಟೀಲ್, ಡಾ. ಎನ್.ಆರ್.ಪ್ರಹ್ಲಾದ್, ಡಾ. ಎಸ್.ಆರ್.ಅಂಜಿನಪ್ಪ, ಡಾ. ವೈ.ರಾಮಪ್ಪ, ಪ್ರೊ. ರೇಣುಕಾ ಸಂಕನಗೌಡರ, ಹೆಚ್.ನಿಜಗುಣ, ಹೊದಿಗೆರೆ ರಮೇಶ್, ಕೆ.ಎಸ್.ಜಯಪ್ಪ.

## ಶಾಲೆ ಬಿಟ್ಟ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ಅರ್ಜಿ

ದಾವಣಗೆರೆ. ಅ.30- ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವಲ್ಲಿ ಸರ್ಕಾರೇತರ ಸಂಘ-ಸಂಸ್ಥೆಗಳನ್ನು ತೊಡಗಿಸಿಕೊಳ್ಳಲು ಎನ್.ಜಿ.ಓ ಗಳಿಂದ ಅರ್ಜಿ ಆಹ್ವಾನಿಸಿದೆ. ಆಸಕ್ತಿಯುಳ್ಳ ಸರ್ಕಾರೇತರ ಸಂಘ ಸಂಸ್ಥೆಯವರು, ಪ್ರಸ್ತಾವನೆಯನ್ನು ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಅಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ, ದಾವಣಗೆರೆ ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ನ. 6 ರೊಳಗಾಗಿ ಸಲ್ಲಿಸಬೇಕು ಎಂದು ಡಿಡಿಪಿಐ ಪರಮೇಶ್ವರಪ್ಪ ಸಿ.ಆರ್. ತಿಳಿಸಿದ್ದಾರೆ.

## ಉಚಿತ ತರಬೇತಿ ಕಾರ್ಯಾಗಾರಕ್ಕೆ ಇಂದು ಚಾಲನೆ



ಹರಿಹರ ತಾಲ್ಲೂಕಿನಾದ್ಯಂತ ಸಾಂಸ್ಕೃತಿಕ, ಆರೋಗ್ಯ, ಶಿಕ್ಷಣ, ಕ್ರೀಡೆ, ಉದ್ಯೋಗ, ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕಳೆದ ಹಲವು ದಿನಗಳಿಂದ ನಿರಂತರವಾಗಿ ಸೇವಾ ಕಾರ್ಯದಲ್ಲಿ ನಿರತವಾಗಿರುವ ಎನ್.ಎಚ್. ಶ್ರೀನಿವಾಸ್ ಸ್ನೇಹ ಬಳಗದ ವತಿಯಿಂದ ಇಂದು ಸ್ಪರ್ಧಾತ್ಮಕ ಪರೀಕ್ಷೆಗಳ ಉಚಿತ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ದೊರೆಯಲಿದೆ.

ನಗರದ ಎಸ್‌ಜೆವಿಪಿ ಕಾಲೇಜಿನಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಎಸ್. ರಾಮಪ್ಪ ನೆರವೇರಿಸಲಿದ್ದಾರೆ. ಇ ಪತ್ರಿಕೆ ಮಾಸ್ಟರ್ ಮೈಂಡ್ ಅನ್ನು ದಾವಣಗೆರೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಬಿಡುಗಡೆ ಮಾಡಲಿದ್ದಾರೆ. ಕಾರ್ಯಾಗಾರದ ನಾಮಫಲಕವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಅನಾವರಣಗೊಳಿಸುವರು. ಸಮಾಜ ಸೇವಕ, ಯುವ ಮುಖಂಡ ಎನ್.ಎಚ್. ಶ್ರೀನಿವಾಸ್ ನಂದಿಗಾವಿ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್. ಲಕ್ಷ್ಮಿ, ಸಿಪಿಐ ಯು. ಸತೀಶ್‌ಕುಮಾರ್, ಎಸ್‌ಜೆವಿಪಿ ಕಾಲೇಜು ಕಾರ್ಯದರ್ಶಿ ಆರ್. ಟಿ. ಪ್ರಶಾಂತ್, ನಿವೃತ್ತ ಪ್ರಾಂಶುಪಾಲ ಎಸ್.ಎಚ್. ಪ್ಯಾಟಿ, ಕಾಲೇಜು ನಿರ್ದೇಶಕ ಎನ್.ಎಂ. ತಿಪ್ಪೇಸ್ವಾಮಿ, ಚಾಣಕ್ಯ ಕೋಚಿಂಗ್ ಸೆಂಟರ್ ನಿರ್ದೇಶಕ ಚಿದಂಬರ್, ಪ್ರಜಾವಾಣಿ ಸ್ಥಾನಿಕ ಸಂಪಾದಕ ಎಸ್. ವಿಶಾಲ್, ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಜಿ.ಎಂ. ಮುರುಗೇಂದ್ರ ಸ್ವಾಮಿ ಹಾಗು ಇನ್ನಿತರರು ಆಗಮಿಸುವರು.

ಖ್ಯಾತ ಚಿತ್ರ ಕಲಾವಿದ ಕೆ. ಜಯ ಕುಮಾರ್, ಯೋಗದಲ್ಲಿ ಗಿನ್ನೀಸ್ ದಾಖಲೆ ಮಾಡಿರುವ ಕೆ. ವೈ.ಸೃಷ್ಟಿ ಮತ್ತು ಯೋಗಪಟು ಎಸ್. ಸ್ಪಂದನ ಇವರುಗಳನ್ನು ಸನ್ಮಾನಿಸಿ, ಗೌರವಿಸಲಾಗುವುದು.

## ಕೋಳಿವಾಡ ಹುಟ್ಟುಹಬ್ಬದ ಕಾರ್ಯಕ್ರಮಗಳು



ರಾಣೇಬೆನ್ನೂರು, ಅ.30- ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ ಹುಟ್ಟುಹಬ್ಬವನ್ನು ಕಾಂಗ್ರೆಸ್ ಪಕ್ಷ ಹಾಗೂ ಅವರ ಅಭಿಮಾನಿಗಳು ನ.1ರಂದು ಆಚರಿಸುತ್ತಿದ್ದು, ಅಂದು ನಡೆಯುವ ವಿವಿಧ ಕಾರ್ಯಕ್ರಮಗಳಲ್ಲಿ ಕೋಳಿವಾಡ ಅವರು ಭಾಗವಹಿಸಲಿದ್ದಾರೆ ಎಂದು ಮುಖಂಡರುಗಳಾದ ಪುಟ್ಟಪ್ಪ ಮರಿಯಮ್ಮನವರ ಹಾಗೂ ಬಸನಗೌಡ ಮರದ ತಿಳಿಸಿದರು. ಅಂದು ಬೆಳಿಗ್ಗೆ 9 ಗಂಟೆಗೆ ಕೋಳಿವಾಡರು ತಮ್ಮ ಸ್ವಂತ ಜಾಗದಲ್ಲಿ ನಿರ್ಮಿಸಿರುವ ನೂತನ ಕಟ್ಟಡವನ್ನು ಕಾಂಗ್ರೆಸ್ ಪಕ್ಷಕ್ಕೆ ಹಸ್ತಾಂತರಿಸುವರು. ನಂತರ ಅಲ್ಲಿಯೇ ರಾಜ್ಯೋತ್ಸವ ಸಮಾರಂಭ, ನಗರದ ಸರ್ಕಾರಿ ಆಸ್ಪತ್ರೆಗಳ ರೋಗಿಗಳಿಗೆ ಹಣ್ಣು, ಹಾಲು ಹಾಗೂ ಬ್ರೆಡ್ ವಿತರಣೆ, ನಂತರದಲ್ಲಿ ಸನ್ಮಾನ ಹಾಗೂ ಶುಭ ಕೋರಿಕೆ ನಡೆಯಲಿದೆ. ರಾಜ್ಯ ಹಾಗೂ ಜಿಲ್ಲೆಯ ಕಾಂಗ್ರೆಸ್ ಮುಖಂಡರು, ಅಭಿಮಾನಿಗಳು ಹಾಗೂ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

## ಇಂದು 'ಅವ್ವ ನನ್ನವ್ವ' ನಾಟಕ ಪ್ರದರ್ಶನ

ಬಾದರ ದಿನ್ನಿ ಆರ್ಟ್ಸ್ ಅಕಾಡೆಮಿ ಹಾಗೂ ದಾವಣಗೆರೆ ರಂಗ ಅನಿಕೇತನ ತಂಡದ ಆಶ್ರಯದಲ್ಲಿ ಇಂದು ಬೆಳಿಗ್ಗೆ 11 ಕ್ಕೆ ನಗರದ ಸರ್ಕಾರಿ ಐಟಿಐ ಕಾಲೇಜು ಸಭಾಂಗಣದಲ್ಲಿ ಕಾರ್ಕಳ ತಾಲ್ಲೂಕಿನ ಮುದ್ರಾಡಿಯಾ ನಮ್ಮ ತುಳುವೇರ್ ಕಲಾ ಸಂಘಟನೆಯಿಂದ ಗುರುರಾಜ್ ಮಾರ್ಪಳ್ಳಿ ನಿರ್ದೇಶನದ 'ಅವ್ವ ನನ್ನವ್ವ' ನಾಟಕ ಪ್ರದರ್ಶನಗೊಳ್ಳಲಿದೆ.

ಕರ್ನಾಟಕ ಬಯಲಾಟ ಸದಸ್ಯ ಎನ್.ಎಸ್. ರಾಜು ಪ್ರದರ್ಶನ ಉದ್ಘಾಟಿಸುವರು. ರಾಘವೇಂದ್ರ ಪಿ.ಯು. ಕಾಲೇಜಿನ ಉಪನ್ಯಾಸಕ ಬಸವರಾಜ್ ಹನುಮಲಿ, ರಂಗಕರ್ಮಿ ಮಹಾಂತೇಶ್ ಆದಿಮ, ಬಾದರದಿನ್ನಿ ಆರ್ಟ್ಸ್ ಅಕಾಡೆಮಿ ಕಾರ್ಯದರ್ಶಿ ಪ್ರಕಾಶ್ ಬಾದರದಿನ್ನಿ, ರಂಗ ಅನಿಕೇತನದ ಹಿರಿಯ ಕಲಾವಿದೆ ಹೆಚ್.ಎನ್. ಸುಧಾ, ಜೆ.ಹೆಚ್. ಪಟೇಲ್ ಕಾಲೇಜಿನ ಪ್ರಾಚಾರ್ಯ ಪ್ರತಿಭಾ ಪಿ. ದೊಗ್ಗಳ್ಳಿ ಭಾಗವಹಿಸಲಿದ್ದಾರೆ.

## ಫ್ರಾನ್ಸಿಸ್ ಭೇಟಿ

**(1ನೇ ಪುಟದಿಂದ)** ಎರಡನೇ ಜಾನ್ ಪೌಲ್ ಭಾರತಕ್ಕೆ ಬಂದಿದ್ದರು.

ಮೋದಿ ಹಾಗೂ ಪೋಪ್ ನಡುವೆ ಮೊದಲು 20 ನಿಮಿಷಗಳ ಅವಧಿಗೆ ಭೇಟಿ ನಿಗದಿಯಾಗಿತ್ತು. ಆದರೆ, ಒಂದು ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

## ಮಣಿಪಾಲ್ ಕಾರ್ಡ್ ನೋಂದಣಿ ವಿಸ್ತರಣೆ

ಮಲೇಬೆನ್ನೂರು, ಅ.30- ಮಣಿಪಾಲ ಆರೋಗ್ಯ ಕಾರ್ಡ್ ನೋಂದಣಿ ಅವಧಿಯನ್ನು ನ.30 ರವರೆಗೆ ವಿಸ್ತರಿಸಲಾಗಿದೆ ಎಂದು ಕಸ್ತೂರಬಾ ಆಸ್ಪತ್ರೆ ಮಣಿಪಾಲದ ಉಪ ವ್ಯವಸ್ಥಾಪಕ ಮೋಹನ್ ಶೆಟ್ಟಿ ತಿಳಿಸಿದ್ದಾರೆ.

ಈ ಸಂಬಂಧ ಸುದ್ದಿಗೋಷ್ಠಿ ನಡೆಸಿದ ಅವರು, ಮಣಿಪಾಲ ಆರೋಗ್ಯ ಕಾರ್ಡ್ ಅನ್ನು ಸಾರ್ವಜನಿಕರಿಗಾಗಿ ಗುಣಮಟ್ಟದ ಆರೋಗ್ಯ ಚಿಕಿತ್ಸೆ ಕೈಗೆಟುವಂತೆ ಮಾಡುವ ಉದ್ದೇಶದಿಂದ ಆರಂಭಿಸಲಾಯಿತು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಸ್ತೂರಬಾ ಆಸ್ಪತ್ರೆ ಮಣಿಪಾಲದ ಪ್ರತಿನಿಧಿ ಶ್ರೀನಿವಾಸ್ ಭಾಗವತ್ ಹಾಗೂ ಅನಿಲ್ ನಾಯ್ಕ ಉಪಸ್ಥಿತರಿದ್ದರು.


## ಹುಟ್ಟುಹಬ್ಬದ ಶುಭಾಶಯಗಳು



ನಮ್ಮ ಆತ್ಮೀಯ ಮುಖಂಡರು,
ಜನಪ್ರಿಯ ನಾಯಕರು, ವಿಧಾನಸಭೆ ಮಾಜಿ
ಅಧ್ಯಕ್ಷರು, ಮಾಜಿ ಸಚಿವರೂ ಆದ

**ಸನ್ಮಾನ್ಯ ಶ್ರೀ ಕೆ.ಬಿ.ಕೋಳಿವಾಡ**
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು...


ರವಿಕುಮಾರ.ಆರ್. ಮಾಂಡ್ರೆ


ಕಿರಣ್‌ಕುಮಾರ್ ಆರ್. ಮಾಂಡ್ರೆ


ರಾಮ್‌ಕುಮಾರ್ ಬಿ. ಮಾಂಡ್ರೆ


ರಾಹುಲಕುಮಾರ್ ಬಿ. ಮಾಂಡ್ರೆ

ಮಾಂಡ್ರೆ ಸ್ವೀಟ್ಸ್. ರಾಣೇಬೆನ್ನೂರು



# ದೇಶದ ಎಲ್ಲಾ ಮಂಡಲ ತಲುಪಲು ಆರ್‌ಎಸ್‌ಎಸ್ ಯೋಜನೆ

ಧಾರವಾಡ, ಅ. 30 - ಮುಂದಿನ ಮೂರು ವರ್ಷಗಳಲ್ಲಿ ದೇಶದ ಎಲ್ಲಾ ಭಾಗಗಳಿಗೆ ತಲುಪಲು ಯೋಜಿಸಿರುವುದಾಗಿ ಆರ್.ಎಸ್.ಎಸ್. ತಿಳಿಸಿದೆ. ಮೂರು ದಿನಗಳ ಕಾಲ ನಡೆದ ಅಖಿಲ ಭಾರತೀಯ ಕಾರ್ಯಕಾರಿ ಮಂಡಳಿ ಸಭೆಯ ನಂತರ ಮಾತನಾಡಿರುವ ಸಂಘಟನೆಯ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ, ನಾವು ನಮ್ಮ ಚಟುವಟಿಕೆಗಳನ್ನು ವಿಸ್ತರಿಸಲು ಬಯಸಿದ್ದೇವೆ. ಪ್ರಸಕ್ತ ದೇಶದ 6,483 ಮಂಡಲಗಳ ಪೈಕಿ, 4,683ನ್ನು ತಲುಪಿದ್ದೇವೆ. ಮಾರ್ಚ್ 2024ರ ವೇಳೆಗೆ ದೇಶದ ಎಲ್ಲ ಮಂಡಲಗಳನ್ನು ತಲುಪುವ ಗುರಿ ಹೊಂದಿದ್ದೇವೆ ಎಂದು ತಿಳಿಸಿದ್ದಾರೆ.

2025ಕ್ಕೆ ಆರ್.ಎಸ್.ಎಸ್. ಶತಮಾನೋತ್ಸವ ಆಚರಿಸಲಿದೆ. ಈ ವೇಳೆಗೆ ಎಲ್ಲ ಮಂಡಲಗಳಲ್ಲಿ ತಲುಪಲು ಎರಡು ವರ್ಷ ಕಾಲ ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸಲು ಮುಂದೆ ಬರುವಂತೆಯೂ ಸಂಘ ಆಹ್ವಾನಿಸಿದೆ. ಮಿಜೋರಾಂ, ನಾಗಾಲ್ಯಾಂಡ್, ಕಾಶ್ಮೀರ ಹಾಗೂ ಲಕ್ಷದ್ವೀಪಗಳಲ್ಲಿ ಸಂಘದ ಚಟುವಟಿಕೆಗಳು ನಡೆಯುತ್ತಿಲ್ಲ. ಕಾಶ್ಮೀರದಲ್ಲಿ ಶಾಖೆಗಳಿದ್ದವು. ಆದರೆ, ಹಿಂದೂಗಳು ಅಲ್ಲಿಂದ ವಲಸೆ ಬಂದ ನಂತರ ಚಟುವಟಿಕೆಗಳ ಮೇಲೆ ಪರಿಣಾಮವಾಗಿದೆ ಎಂದು ಹೊಸಬಾಳೆ ಹೇಳಿದ್ದಾರೆ.

34 ಸಾವಿರ ಸ್ಥಳಗಳಲ್ಲಿ ಈಗ ಶಾಖೆಯ ಚಟುವಟಿಕೆಗಳು ಪ್ರತಿನಿತ್ಯ ನಡೆಯುತ್ತಿವೆ. ಒಟ್ಟು 55 ಸಾವಿರ ಸ್ಥಳಗಳಲ್ಲಿ ಪ್ರತಿನಿತ್ಯ, ವಾರ, ಹದಿನೈದು ದಿನಗಳ ಹಾಗೂ ಮಾಸಿಕ ಚಟುವಟಿಕೆಗಳು ನಡೆಯುತ್ತಿವೆ ಎಂದೂ ಅವರು ಹೇಳಿದ್ದಾರೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ, ಎಲೆಮರೆಯ ಕಾಯಿಯಂತಿರುವ ಸ್ವಾತಂತ್ರ್ಯ ಹೋರಾಟಗಾರರು ನೀಡಿರುವ ಕೊಡುಗೆಗಳನ್ನು ಗುರುತಿಸಿ, ಪ್ರದರ್ಶನಗಳನ್ನು ಆಯೋಜಿಸಲಾಗುವುದು ಎಂದೂ ಅವರು ತಿಳಿಸಿದ್ದಾರೆ.

# ದಾವಣಗೆರೆ ತಾ.ಗೆ ಲಸಿಕೆ ಹಂಚಿಕೆ

ದಾವಣಗೆರೆ, ಅ.30- ತಾಲ್ಲೂಕಿಗೆ ನ. 1 ಮತ್ತು 2 ರಂದು ಒಟ್ಟು 27500 ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಯನ್ನು ಹಂಚಿಕೆ ಮಾಡಲಾಗಿದೆ. ನಗರ ವ್ಯಾಪ್ತಿಯಲ್ಲಿರುವ ಎಲ್ಲಾ 9 ನಗರ ಆರೋಗ್ಯ ಉಪಕೇಂದ್ರಗಳಲ್ಲಿ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆ ನೀಡಲಾಗುವುದು. ತಾಲ್ಲೂಕು ವ್ಯಾಪ್ತಿಯ ಎಲ್ಲ 25 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ದಾವಣಗೆರೆ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಕೋವಿಶೀಲ್ಡ್ ಲಸಿಕೆ ನೀಡಲಾಗುತ್ತದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

# ಖಾತ್ರಿ ಬೇಡಿಕೆ ಹೆಚ್ಚಾದರೂ ಅನುದಾನದ ಕೊರತೆ : ಪಿಎಇಜಿ

ನವದೆಹಲಿ ಅ. 30 - ಕೊರೊನಾ ಕಾರಣದಿಂದಾಗಿ ಉದ್ಯೋಗ ಖಾತ್ರಿ ಕೆಲಸಕ್ಕೆ ಬೇಡಿಕೆ ಹೆಚ್ಚಾದರೂ, ತೀವ್ರ ಅನುದಾನ ಕೊರತೆ ಇದೆ ಎಂದು ಕಾರ್ಯಕರ್ತರ ಗುಂಪೊಂದು ತಿಳಿಸಿದೆ.

ಉದ್ಯೋಗ ಖಾತ್ರಿ ಯೋಜನೆಯ ಶೇ.90ರಷ್ಟು ಹಣ ಈಗಾಗಲೇ ಖರ್ಚಾಗಿದ್ದು, ಹಣಕಾಸು ವರ್ಷ ಮುಗಿಯಲು ಇನ್ನೂ ಐದು ತಿಂಗಳಿದೆ ಎಂದು ಪೀಪಲ್ಸ್ ಆಕ್ಷನ್ ಫಾರ್ ಎಂಪ್ಲಾಯ್‌ಮೆಂಟ್ ಗ್ಯಾರಂಟಿ (ಪಿ.ಎ.ಇ.ಜಿ.) ಹೇಳಿಕೆಯಲ್ಲಿ ತಿಳಿಸಲಾಗಿದೆ. ಉದ್ಯೋಗ ಖಾತ್ರಿ ಯೋಜನೆ ಲಕ್ಷಾಂತರ ಬಡವರ ಜೀವನಾಡಿಯಾಗಿದೆ. ಆದರೂ, 2021-22ರ ಸಾಲಿಗೆ ಕಳೆದ ವರ್ಷಕ್ಕಿಂತ ಶೇ.34ರಷ್ಟು ಕಡಿಮೆ ಹಣ ನೀಡಲಾಗಿದೆ ಎಂದು ಪಿ.ಎ.ಇ.ಜಿ. ತಿಳಿಸಿದೆ.

2020-21ರಲ್ಲಿ ಉದ್ಯೋಗ ಖಾತ್ರಿಗೆ ಪರಿವರ್ತಿತ ಅಂದಾಜಿನ ಮೂಲಕ 1.11 ಲಕ್ಷ ಕೋಟಿ ರೂ. ನೀಡಲಾಗಿತ್ತು. 2021-22ರ ಸಾಲಿಗೆ 73,000 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ, ಸರ್ಕಾರ ಉದ್ಯೋಗ ಖಾತ್ರಿಗಾಗಿ ಹೆಚ್ಚುವರಿ ಹಣ ಒದಗಿಸಲು ಬದ್ಧವಾಗಿದೆ ಎಂದು ತಿಳಿಸಿದೆ.

ಕೂಲಿ ಹಣ ಬಿಡುಗಡೆ ನಿರಂತರ ಪ್ರಕ್ರಿಯೆಯಾಗಿದೆ. ಪ್ರಸಕ್ತ ಕೂಲಿಗಾಗಿ 8,921 ಕೋಟಿ ರೂ.ಗಳ ನಿಧಿ ಲಭ್ಯವಿದೆ. ಹೆಚ್ಚುವರಿ ಹಣ ಅಗತ್ಯವಾದಾಗ ಹಣಕಾಸು ಸಚಿವಾಲಯಕ್ಕೆ ಮನವಿ ಸಲ್ಲಿಸಲಾಗುವುದು. ಕಳೆದ ವರ್ಷ ಹಣಕಾಸು ಸಚಿವಾಲಯ ಬಜೆಟ್ ಅನುದಾನ ಮೀರಿ 50 ಸಾವಿರ ಕೋಟಿ ರೂ.ಗಳ ಹೆಚ್ಚುವರಿ ಅನುದಾನವನ್ನು ಒದಗಿಸಿತ್ತು ಎಂದು ಗ್ರಾಮೀಣಾಭಿವೃದ್ಧಿ ಸಚಿವಾಲಯ ಹೇಳಿದೆ.


|| ಶ್ರೀ ಗುರು ಲೆಕ್ಕದೇಶ್ವರಸ್ವಾಮಿ ಪ್ರಸನ್ನ ||

**ಶುಭ ವಿವಾಹ ಆಹ್ವಾನ**

ಲಿಂ. ಶ್ರೀ ಜಂಬಗಿ ಶರಣಪ್ಪ ಲಿಂ. ಬಿ. ಮಲ್ಲಪ್ಪ ಮತ್ತು ಲಿಂ. ಶ್ರೀಮತಿ ಕಮಲಮ್ಮ

ಇವರುಗಳ ಆಶೀರ್ವಾದದೊಂದಿಗೆ

ಶ್ರೀಮತಿ ಜ್ಯೋತಿ ಮತ್ತು ಶ್ರೀ ರಾಧೇಶ್ ಜಂಬಗಿ, ದಾವಣಗೆರೆ.

ಇವರುಗಳು ಮಾಡುವ ವಿಜ್ಞಾಪನೆಗಳು.

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶ್ರೀ ಮನೃಪ ಶಾಲಿವಾಹನ ಶಕೆ 1943ನೇ ಪ್ಲವನಾಮ ಸಂವತ್ಸರದ ಕೃಷ್ಣ ಪಕ್ಷ ದಿನಾಂಕ 31.10.2021ನೇ ಭಾನುವಾರ ಬೆಳಿಗ್ಗೆ 9.50 ರಿಂದ 10.45ರವರೆಗೆ ಸಲ್ಲುವ ಧನಸ್ಸು ಲಗ್ನದ ಶುಭ ಮುಹೂರ್ತದಲ್ಲಿ

ನಮ್ಮ ಸುಪುತ್ರಿ

ಚಿ|| ಕುಂ|| ಸೌ|| ಶ್ರೇಯಾ

ಚಿ|| ರಾ|| ಕವನ್ ಅಶೋಕ್

ಶ್ರೀಮತಿ ಕೋಕಿಲ ಮತ್ತು ಶ್ರೀ ಬಿ.ಎಂ. ಅಶೋಕ್ ಇವರ ಸುಪುತ್ರ

ಕಾಫಿ ಬೆಳೆಗಾರರು, ಬೆಳ್ಳಾವರ ವಂಶಸ್ಥರು, ಬಿಳಗವಳ್ಳಿ ಎಸ್ಟೇಟ್

ಇವರುಗಳ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕುಟುಂಬ ಸಮೇತರಾಗಿ ಆಗಮಿಸಿ, ವಧು-ವರರನ್ನು ಆಶೀರ್ವದಿಸಿ ಹಾಗೂ ನಮ್ಮ ಆತಿಥ್ಯವನ್ನು ಸ್ವೀಕರಿಸಲು ಕೋರುವ...

ತಮ್ಮ ಆಗಮನಾಭಿಲಾಷಿಗಳು :

ಶ್ರೀಮತಿ ಜ್ಯೋತಿ ಮತ್ತು ಶ್ರೀ ರಾಧೇಶ್ ಜಂಬಗಿ

ವಿವಾಹ ಮುಹೂರ್ತ : 31.10.2021ನೇ ಭಾನುವಾರ ಬೆಳಿಗ್ಗೆ 9.50 ರಿಂದ 10.45ರವರೆಗೆ

ಆರತಕ್ಷತೆ : 31.10.2021ನೇ ಭಾನುವಾರ, ಬೆಳಿಗ್ಗೆ 11.45 ರಿಂದ

ಸ್ಥಳ : ಎಸ್.ಎಸ್. ಕನ್ವೆನ್‌ಷನ್ ಹಾಲ್

ಶಿವಶಂಕರಪ್ಪ ಕನ್ವೆನ್‌ಷನ್ ಹಾಲ್, ಶಾಮನೂರು ರಸ್ತೆ, ದಾವಣಗೆರೆ.

ತಮ್ಮ ಸುಖಾಗಮನವನ್ನು ಬಯಸುವವರು :

ಜಂಬಗಿ ವಂಶಸ್ಥರು, ಬೆಳ್ಳಾವರ ವಂಶಸ್ಥರು ಹಾಗೂ ಬಂಧು-ಮಿತ್ರರು





**ಹುಟ್ಟುಹಬ್ಬದ ಶುಭಾಶಯಗಳು**

ಇಂದು (31.10.2021) ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷರು, ನಮ್ಮ ಆತ್ಮೀಯರಾದ

ಶ್ರೀ ನಿರಂಜನ ನಿಶಾನಿಮಠ

ಅವರಿಗೆ ಜನ್ಮದಿನದ ಶುಭಾಶಯಗಳು

- ಶ್ರೀ ಎನ್.ಎ. ಮುರುಗೇಶ್ ಅಧ್ಯಕ್ಷರು, ಡಿ.ಹೆಚ್.ಯು.ಸಿ. ಬ್ಯಾಂಕ್
- ಶ್ರೀ ಎಂ. ಉಮಾಪತಯ್ಯ ಸಿ.ಎ.
- ಶ್ರೀ ಎಂ. ಹಾಲಸ್ವಾಮಿ ಕಂಬ್ಳಿ
- ಲಯನ್ ಎನ್.ವಿ. ಬಂಡಿವಾಡ್, ನಿರ್ದೇಶಕರು, ಸಿಟಿ. ಕೋ-ಆಪರೇಟಿವ್ ಬ್ಯಾಂಕ್
- ಶ್ರೀ ಲಯನ್ ಹೆಚ್.ವಿ. ಮಂಜುನಾಥ ಸ್ವಾಮಿ
- ಶ್ರೀ ಸಂತೋಷ್ ಕುಮಾರ್. ಬಿ
- ಶ್ರೀ ಶಿವಕುಮಾರ್ ಬಿ.ಆರ್.



ದೀಪಾವಳಿಯನ್ನು ನಮ್ಮೊಂದಿಗೆ ಸಂಭ್ರಮಿಸಿ

ಗ್ರಾಹಕರ ಸೇವೆಯೇ ಮುಖ್ಯ ಗುರಿಯನ್ನಾಗಿಸಿಕೊಂಡಿರುವ

ನಿಮ್ಮ ಅಂಗಡಿ 'ರವಿತೇಜ'

ಗ್ರಾಹಕರ ಅಪೇಕ್ಷೆಯ ಮೇರೆಗೆ

ರವಿತೇಜ ಮೆನ್ಸ್ ವೇರ್

ಹೊಸ ಶೋರೂಂ ಅನ್ನು ಆರಂಭಿಸಲಾಗಿದೆ.

ನವನವೀನತೆಯ ಉಡುಪುಗಳಿಗಾಗಿ ನಮ್ಮೆಲ್ಲಾ ಶಾಖೆಗಳಿಗೆ ಇಂದೇ ಭೇಟಿ ಕೊಡಿ

Raviteja Textiles

Silk Sarees | Mens Wear | Kids Wear

Raviteja Garments, Chamarajpet Ph. : 98800 32999

Raviteja's, Vidyanagar Ph. : 98803 82611

Raviteja Fashion, Chetana Hotel Road Road Ph. : 95916 33871

Raviteja Silks & Sarees, Vijayalakshmi Road, Ph. : 98444 66844, 97419 53993





ನಮ್ಮೆಲ್ಲಾ ಗ್ರಾಹಕರಿಗೆ ದಸರಾ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

ಅಂಬರ್‌ಕರ್ ಯಲ್ಲಪ್ಪ ಸ್ವಾಮಿರಾವ್

AMBERKAR YELLAPPA SWAMYRAO

The World of Colours, Kithens & Wardrobes

#460/1, (near clocktower)
VIJAYALAKSHMI ROAD
Kaipet Corner
Davangere-577 001.
80504 03090, 99800 53167

#901/6, HADADI ROAD
Beside Royal enfield Showroom,
Shivakumara swamy layout,
Davangere-577 005.
63664 05555, 63665 05555

Beautiful Homes with asianpaints | Birla White THE WHITEST WHITE CEMENT | asianpaints Safe PAINTING SERVICE | asianpaints | Areva Paints Paint your dreams | Sleek by asianpaints KITCHENS • WARDROBES











ಈ ದೀಪಾವಳಿಯಲ್ಲಿ ನಿಮ್ಮ ಅಂದದ ಮನೆಗೆ ಕನಸಿನ ರಂಗು....


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte